ಸಂಪುಟ 01 | ಸಂಚಿಕೆ 166 ಗುರುವಾರ 20 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1. ಸದ್ಭಾವನಾ ದಿನ (Sadbhavana Diwa)

ಆಗಸ್ಟ್ 20ರಂದು ಭಾರತದಲ್ಲಿ ಸದ್ಭಾವನಾ ದಿನವನ್ನು ಆಚರಿಸಲಾಗುತ್ತದೆ. ಇದು ಮಾಜಿ ಪ್ರಧಾನಮಂತ್ರಿ ರಾಜೀವ್ ಗಾಂಧಿ ಅವರ ಜನ್ಮದಿನದ ಸ್ಮರಣಾರ್ಥ ಆಚರಿಸಲಾಗುತ್ತದೆ. ಈ ದಿನವು ರಾಷ್ಟ್ರೀಯ ಏಕತೆ, ಶಾಂತಿ, ಸೌಹಾರ್ದತೆ ಮತ್ತು ಸಹೋದರತ್ವವನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ.

2. ವಿಶ್ವ ಸೊಳ್ಳೆ ದಿನ (World Mosquito Day)

ಆಗಸ್ಟ್ 20ರಂದು ವಿಶ್ವ ಸೊಳ್ಳೆ ದಿನವನ್ನು ಕೂಡ ಆಚರಿಸಲಾಗುತ್ತದೆ. ಸೊಳ್ಳೆಗಳಿಂದ ಹರಡುವ ರೋಗಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸುವುದು ಇದರ ಉದ್ದೇಶ.

## ಸುಭಾಷಿತ

ಸಂಸ್ಕೃತಿಯೆಂದರೆ ಮನುಷ್ಯರ ಅನ್ನೋನ್ಯ
ಸಂಬಂಧಗಳಲ್ಲಿ ನಯವಿನಯಗಳ
ಸೊಬಗು, ಸ್ವಗುಣ ಪರಗುಣಗಳ
ಸಮ್ಮಿಶ್ರಿತ ಕಾಂತಿ.

ಡಿ.ವಿ. ಗುಂಡಪ್ಪ

# ಸಚಿವ ನಾಗೇಂದ್ರ ರಾಜೀನಾಮೆಗೆ ಬಿಜೆಪಿ ಬಿಗಿ ಪಟ್ಟು : ವಿಧಾನಪರಿಷತ್‌ನಲ್ಲಿ ಗದ್ದಲ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬಹುಕೋಟಿ ಹಗರಣ ಸಂಬಂಧ ಸಚಿವ ಬಿ.ನಾಗೇಂದ್ರ ಅವರು ತಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ಪ್ರತಿಪಕ್ಷ ಬಿಜೆಪಿ ಪಟ್ಟು ಹಿಡಿದ ಪರಿಣಾಮ ವಿಧಾನಪರಿಷತ್ ಕಲಾಪ ಬಹುತೇಕ ನೀರಿನಲ್ಲಿ ಹೋಮ ಮಾಡಿದಂತಾಗಿದೆ.**

ಸಚಿವ ನಾಗೇಂದ್ರ ರಾಜೀನಾಮೆ ನೀಡಬೇಕು. ಇಲ್ಲವೇ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು ಬಿಜೆಪಿ ನಡೆಸುತ್ತಿರುವ ಪ್ರತಿಭಟನೆ ಪರಿಷತ್‌ನಲ್ಲಿ ಮುಂದುವರೆದಿದ್ದು, ಸಭಾಪತಿಗಳ ಮನವಿ ಹಾಗೂ ನಡೆಸಿದ ಸಂಧಾನವು ಲ ಕೊಟ್ಟಿಲ್ಲ. ಮುಂದುವರೆದ ಮುಂಗಾರು ಅಧಿವೇಶನದಲ್ಲಿ ಸಂತಾಪ ನಿರ್ಣಯ ಮಂಡನೆ ಮಾಡಿದ ಮೇಲೆ ಪ್ರಶ್ನೋತ್ತರ ಅವಧಿಯನ್ನು ಕೈಗೆತ್ತಿಕೊಳ್ಳಲು ಮುಂದಾದರು.

ಈ ವೇಳೆ ಬಿಜೆಪಿ ಸದಸ್ಯರು ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಕೊರಳಿಗೆ ಕಪ್ಪು ಶಾಲು ಧರಿಸಿ ಸಚಿವ ನಾಗೇಂದ್ರ ರಾಜೀನಾಮೆ ನೀಡಬೇಕೆಂದು ಸದನದಲ್ಲಿ ಗದ್ದಲ ಎಬ್ಬಿಸಿದರು. ಗದ್ದಲದ



ನಡುವೆಯೇ ಸಭಾಪತಿ ಸಲೀಂ ಅವರು, ಈಗಾಗಲೇ ಮೂರು ದಿನ ಕಲಾಪ ವ್ಯರ್ಥವಾಗಿದೆ.

ರಾಜ್ಯದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಒಂದು ಕಡೆ ಬರಗಾಲ ಮತ್ತೊಂದು ಕಡೆ ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಸೇರಿದಂತೆ ಹಲವು ಸಮಸ್ಯೆಗಳಿವೆ. ಇದರ ಬಗ್ಗೆ ಸದನದಲ್ಲಿ ಅರ್ಥಪೂರ್ಣವಾದ ಚರ್ಚೆಯಾಗಲಿ. ಇಡೀ ರಾಜ್ಯದ ಜನತೆ ಸದನವನ್ನು ಗಮನಿಸುತ್ತಿದ್ದಾರೆ. ಸದಸ್ಯರು ಯಾವ ವಿಷಯವನ್ನು ಚರ್ಚೆ ಮಾಡುತ್ತಾರೆ, ಸರ್ಕಾರ ಏನು ಉತ್ತರ ಕೊಡುತ್ತದೆ? ನಮಗೆ ಪರಿಹಾರ ಸಿಗಲಿದೆಯೇ ಎಂಬ ನಿರೀಕ್ಷೆಯಲ್ಲಿದ್ದಾರೆ.

ನಾನು ಎರಡು ಬಾರಿ ಈಗಾಗಲೇ ಸಭೆ ನಡೆಸಿದ್ದೇನೆ. ಮತ್ತೆ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಪ್ರತಿಪಕ್ಷದ ಸದಸ್ಯರು ಹಠ ಮಾಡದೆ ಸುಗಮವಾಗಿ ಕಲಾಪ ನಡೆಯಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು. ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ನಾವು ಸದನಕ್ಕೆ ಅಡ್ಡಿಪಡಿಸುವ ಉದ್ದೇಶ ಇಟ್ಟುಕೊಂಡಿಲ್ಲ. ಸದನದಲ್ಲಿ ಅರ್ಥಪೂರ್ಣವಾದ ಚರ್ಚೆ ನಡೆಯಬೇಕೆಂಬುದು ನಮ ಆಶಯ. ಬರಗಾಲ, ಕೆಪಿಎಸ್‌ಸಿ, ಬಿಡದಿ, ನೈಸ್ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚೆಯಾಗಬೇಕು. ಇದಕ್ಕೆ ನಾವು ಕೂಡ ಸಿದ್ದರಿದ್ದೇವೆ. ನಾವು ಕಲಾಪವನ್ನು ಅಡ್ಡಿಪಡಿಸುತ್ತಿಲ್ಲ. ಆರೋಪಿ ಸ್ಥಾನಲದಲ್ಲಿರುವ ಸಚಿವರು ರಾಜೀನಾಮೆ ನೀಡಬೇಕು ಎಂಬುದು ನಮ ಬೇಡಿಕೆ. ಇದನ್ನು ಸರ್ಕಾರ ಈಡೇರಿಸಿದರೆ ನಮ ಅಭ್ಯಂತರವೇನಿಲ್ಲ. ಸರ್ಕಾರವು ಮೊಂಡು ಹಠ ಬಿಡಲಿ ಎಂದು ಹೇಳಿದರು.

ಈ ಪ್ರಕರಣದಲ್ಲಿ 600 ಖಾತೆಗಳಿಗೆ ಹಣ ವರ್ಗಾವಣೆಯಾಗಿದೆ ಎಂದು ಆರೋಪವಿದೆ. ಈಗಾಗಲೇ ಚಾರ್ಜ್‌ಶೀಟ್ ಕೂಡ ಹಾಕಲಾಗಿದೆ. ಆರೋಪಿ ಸ್ಥಾನದಲ್ಲಿರುವವರು ಸಂಪುಟದಲ್ಲಿ ಮುಂದುವರೆಯಬಾರದು. ಸಭಾಪತಿಗಳ ಸಲಹೆಯನ್ನು ಸಂಪೂರ್ಣವಾಗಿ ನಾವು ಒಪ್ಪುತ್ತೇವೆ. ನೀವು ನೀಡುವ ಆದೇಶಕ್ಕೆ ನಮ ವಿರೋಧವಿಲ್ಲ ಎಂದು ಸ್ಪಷ್ಟಪಡಿಸಿದರು.

ಆಗ ಮಾಜಿ ಸಭಾಪತಿ ಹಾಗೂ ಹಿರಿಯ ಸದಸ್ಯ ಬಸವರಾಜ ಹೊರಟ್ಟಿ ಮಾತನಾಡಿ, ಸದನ ನಡೆಯುತ್ತಿರುವ ರೀತಿ ನನಗೆ ನಾಚಿಕೆಯಾಗುತ್ತಿದೆ. ಇದು ಯಾರಿಗೂ ಶೋಭೆ ತರುವುದಿಲ್ಲ. ಸಭಾಪತಿಗಳು ಹೇಳಿದಂತೆ ಮೊದಲು ಪ್ರಶ್ನೋತ್ತರ ಕಲಾಪ ಮುಗಿಯಲಿ ನಂತರ ಚರ್ಚೆ ಅವಕಾಶ ಕೊಡುತ್ತಾರೆಂದು ಸಲಹೆ ಮಾಡಿದರು.

## ನಾಳೆ(ಆ.21) ಭೋವಿ ವಡ್ಡರ ಕಾಲೋನಿಗೆ ಸಿದ್ಧಲಿಂಗ ಶ್ರೀ ಭೇಟಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಐತಿಹಾಸಿಕ ಶ್ರೀ ಖಾಸ್ಗತೇಶ್ವರ ಮಠದ ಪೀಠಾಧಿಪತಿಗಳಾದ ಬಾಲಶಿವಯೋಗಿ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ನಾಳೆ(ಆ.21) ರಂದು ಬೆಳಿಗ್ಗೆ 9:00 ಘಂಟೆಗೆ ಸ್ಥಳೀಯ ಶ್ರೀ ಸಿದ್ಧರಾಮೇಶ್ವರ ಭೋವಿ (ವಡ್ಡರ್) ಕಾಲೋನಿಗೆ ಶುಭ ಪಾದಾರ್ಪಣೆ ಮಾಡಲಿದ್ದಾರೆ.**



ಪೂಜ್ಯ ಶ್ರೀಗಳ ಆಗಮನದ ಹಿನ್ನೆಲೆಯಲ್ಲಿ ಕಾಲೋನಿಯಲ್ಲಿ ವಿಶೇಷ ಕಾರ್ಯಕ್ರಮ ಹಾಗೂ ಸನ್ನಿಧಿ ಆಶೀರ್ವಚನ ನೆರವೇರಲಿದೆ. ಈ ಸುಸಂದರ್ಭದಲ್ಲಿ ಶ್ರೀ ಸಿದ್ಧರಾಮೇಶ್ವರ ಭೋವಿ ವಡ್ಡರ ಸಮಾಜದ ಬಾಂಧವರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಪೂಜ್ಯ ಶ್ರೀಗಳ ದಿವ್ಯ ಸಾನ್ನಿಧ್ಯ ಮತ್ತು ಆಶೀರ್ವಾದ ಪಡೆಯಬೇಕೆಂದು ಭೋವಿ ವಡ್ಡರ ಸಮಾಜದ ಗೌರವ ಅಧ್ಯಕ್ಷ ದೇವು ಕೂಚಬಾಳ ಹಾಗೂ ಅಧ್ಯಕ್ಷ ಶ್ರೀನಿವಾಸ್, ಕುಲಕರ್ಣಿ ಇವರು ಸಮಾಜದ ಪರವಾಗಿ ನೀಡಿದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾನ್ವಿ: 187ನೇ ವಿಶ್ವ ಛಾಯಾಗ್ರಹಣ ದಿನಾಚರಣೆ ಸಮಾಜದ ಜೀವಂತ ಚಿತ್ರಣ ಕಟ್ಟಿಕೊಡುವ ಛಾಯಾಗ್ರಾಹಕರಿಗೆ ಗೌರವ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಹಳೆ ಎಲ್.ಐ.ಸಿ. ಕಾಂಪ್ಲೆಕ್ಸ್‌ನಲ್ಲಿ ಮಾನ್ವಿ ತಾಲೂಕು ಛಾಯಾಗ್ರಾಹಕರ ಸಂಘದ ವತಿಯಿಂದ 187ನೇ ವಿಶ್ವ ಛಾಯಾಗ್ರಹಣ ದಿನವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮದ ಆರಂಭದಲ್ಲಿ ಛಾಯಾಗ್ರಹಣ ಕ್ಷೇತ್ರದ ಪಿತಾಮಹ ಲೋಯಿಸ್-ಜಾಕ್ವೆಸ್-ಮಾಂಡೆ ಡಾಗೆರೆ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ, ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಲಾಯಿತು.**

ಈ ಸಂದರ್ಭದಲ್ಲಿ ಮಾತನಾಡಿದ ಪ್ರಮುಖರು, ಸಮಾಜದಲ್ಲಿ ನಡೆಯುವ



ಪ್ರತಿಯೊಂದು ಮಹತ್ವದ ಘಟನೆಗಳನ್ನು ಮತ್ತು ಮಧುರ ನೆನಪುಗಳನ್ನು ಜೀವಂತವಾಗಿಡುವಲ್ಲಿ ಛಾಯಾಗ್ರಾಹಕರ ಪಾತ್ರ ಅಪಾರವಾಗಿದೆ ಎಂದು ಬಣ್ಣಿಸಿದರು. ಪ್ರಚಲಿತ ದಿನಗಳಲ್ಲಿ ತಂತ್ರಜ್ಞಾನ ಡಿಜಿಟಲ್ ಮಟ್ಟದಲ್ಲಿ ಬೆಳೆದಂತೆ ಛಾಯಾಗ್ರಾಹಕರು ಎದುರಿಸುತ್ತಿರುವ ಸವಾಲುಗಳು ಹಾಗೂ ಉದ್ಯೋಗದ ಭದ್ರತೆ ಕುರಿತು ಈ ವೇಳೆ ವಿಸ್ತೃತವಾಗಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕಿನ ಹಿರಿಯ ಹಾಗೂ ಕಿರಿಯ ಛಾಯಾಗ್ರಾಹಕರಾದ ಪ್ರಸಾದ್ ಮಿಶ್ರಾ, ಜಗನ್ನಾಥ್ ಚೌದ್ರಿ, ಶ್ರೀನಾಥ್ ಚೌಧರಿ, ಪ್ರಭು ಕುಂಬಾರ್, ರವಿಕುಮಾರ್ ಗೌಡ, ಸಿ.ನಾಗರಾಜ್, ಗಯಾಜ್, ರಾಮ್ ಪ್ರಸಾದ್ ಮಿಶ್ರ, ಸಿರಾಜ್, ಶಫಿ, ಮಂಜುನಾಥ್, ಶಿವಕುಮಾರ್ ಸಜ್ಜನ್, ಶರಣು ಕಳಸ, ಕಾಳಿಂಗ ರಾಜ್, ವಿಜಯ್ ಕುಮಾರ್, ಹುಮಾಯೂನ್, ಮುಸ್ತಫ, ಎ. ಶಂಕರ್, ರವಿ, ಮಲ್ಲು, ಬಸವರಾಜ್, ಅಜಯ್ ಹಾಗೂ ಜಂಬಣ್ಣ ಕುಮಾರ್ ಸೇರಿದಂತೆ ಸಂಘದ ಪದಾಧಿಕಾರಿಗಳು ಮತ್ತು ತಾಲೂಕಿನ ನೂರಾರು ಛಾಯಾಗ್ರಾಹಕರು ಭಾಗವಹಿಸಿ

## ಸೆಪ್ಟೆಂಬರ್-ಅಕ್ಟೋಬರ್ ಮೊದಲ ವಾರದೊಳಗೆ ಕೆರೆಗಳಿಗೆ ನೀರು ರೈತರ ಬೇಡಿಕೆಗೆ ಸ್ಪಂದನೆ ಶಾಸಕ ದೊಡ್ಡನಗೌಡ ಪಾಟೀಲ

ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ಬಾದಿಮನಾಳ, ಜಾಹಾಗೀರಗುಡ್ಡದೂರು ಹಾಗೂ ಮಾವಿನಇಟಗಿ ಕೆರೆಗಳಿಗೆ ನೀರು ತುಂಬಿಸುವಂತೆ ರೈತರು ಹಲವು ವರ್ಷಗಳಿಂದ ಮುಂದಿಟ್ಟಿರುವ ಬೇಡಿಕೆಗೆ ಸ್ಪಂದಿಸಿರುವ ಶಾಸಕ ದೊಡ್ಡನಗೌಡ ಪಾಟೀಲ, ಸೆಪ್ಟೆಂಬರ್ ಅಥವಾ ಅಕ್ಟೋಬರ್ ಮೊದಲ ವಾರದೊಳಗೆ ಕೆರೆಗಳಿಗೆ ನೀರು ಹರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಳೆ ಕೊರತೆಯಿಂದ ರೈತರು ನೀರಿನ ಆತಂಕ



ಎದುರಿಸುತ್ತಿದ್ದಾರೆ. ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಕೆರೆಗಳನ್ನು ತುಂಬಿಸುವುದು ಅಗತ್ಯವಾಗಿದೆ ಎಂದರು. ಕೆಬಿಜೆಎನ್‌ಎಲ್ ಮೂಲಕ ನೀರು ಹರಿಸುವ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಸಚಿವರ ಗಮನಕ್ಕೂ ಈ ವಿಷಯವನ್ನು ತರಲಾಗಿದೆ. ವಿಧಾನಮಂಡಲ ಅಧಿವೇಶನದಲ್ಲಿಯೂ ಸಮಸ್ಯೆಯನ್ನು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು.

ಕೆಬಿ ಜಲಾನಯನ ಪ್ರದೇಶದಿಂದ ಲಭ್ಯವಾಗುವ ನೀರನ್ನು ಕೆರೆಗಳಿಗೆ ಹರಿಸಲು ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಪರಿಶೀಲಿಸಲಾಗುವುದು. ಕೆರೆಗಳು ತುಂಬಿದರೆ ಅಂತರ್ಜಲ ಮಟ್ಟ ಸುಧಾರಿಸಿ, ಬೋರ್‌ವೆಲ್ ಹಾಗೂ ಬಾವಿಗಳಲ್ಲಿ ನೀರಿನ ಲಭ್ಯತೆ ಹೆಚ್ಚಲಿದೆ. ರೈತರು ಶಾಂತಿಯುತವಾಗಿ ಸಹಕರಿಸಬೇಕು. ರೈತರ ಹಿತಾಸಕ್ತಿಯೇ ಮೊದಲ ಆದ್ಯತೆಯಾಗಿದೆ ಎಂದು ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

## ಸಕ್ಕರೆ ಉದ್ಯಮದಲ್ಲಿ ವಿಶಿಷ್ಟ ಸಾಧನೆ: ಸಂಗಮೇಶ ನಿರಾಣಿ ಅವರಿಗೆ ಪ್ರತಿಷ್ಠಿತ ಪ್ರಶಸಿ

ನೈಜ್ಯ ದೆಸೆ ನ್ಯೂಸ್

**ಮುಧೋಳ: ಭಾರತೀಯ ಸಕ್ಕರೆ ತಂತ್ರಜ್ಞರ ಸಂಸ್ಥೆ (ಎಸ್‌ಟಿಎಐ) ವತಿಯಿಂದ ಸಕ್ಕರೆ ಕಾವೇರಿ/ಸಕ್ಕರೆ ಕಾರ್ಖಾನೆಗಳ ಪ್ರೊಸೆಸಿಂಗ್ ತಂತ್ರಜ್ಞಾನ ಕ್ಷೇತ್ರದಲ್ಲಿ ಸಲ್ಲಿಸಿರುವ ವಿಶಿಷ್ಟ ಸೇವೆಯನ್ನು ಗುರುತಿಸಿ ಪ್ರತಿಷ್ಠಿತ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.**

ಶ್ರೇಷ್ಠ ಉದ್ಯಮಿಗಳು ಹಾಗೂ ಉತ್ತಮ ತಂತ್ರಜ್ಞಾನ ನಾಯಕರ ಸಾಧನೆಯನ್ನು ಗುರುತಿಸುವ ನಿಟ್ಟಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ಸಂಗಮೇಶ ಆರ್. ನಿರಾಣಿ ಅವರಿಗೆ ಈ ಗೌರವ ಲಭಿಸಿದೆ. ಶ್ಯಾಮಪ್ರಸಾದ ಮುಖರ್ಜಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಭಾರತೀಯ ಸಕ್ಕರೆ ತಂತ್ರಜ್ಞರ ಸಂಸ್ಥೆಯ 84ನೇ ವಾರ್ಷಿಕ ಸಮ್ಮೇಳನದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಇನ್‌ಸ್ಟಂಟ್ ಗೋಲ್ಡ್ ಮೆಡಲ್ ಎಂಜಿನಿಯರಿಂಗ್ ಫಾರ್ಮ್ ಎಕ್ಸಲೆನ್ಸ್ ವಿಭಾಗದ ಪ್ರಶಸ್ತಿಯನ್ನು ಸಂಗಮೇಶ ನಿರಾಣಿ ಸ್ವೀಕರಿಸಿದರು.

ಸಕ್ಕರೆ ಉದ್ಯಮದಲ್ಲಿ ತಾಂತ್ರಿಕ ಪ್ರಗತಿ, ನವೀನತೆ ಹಾಗೂ ಗುಣಮಟ್ಟದ ಸಾಧನೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಿರುವುದು ಅವರ ಸಾಧನೆಗೆ ಮತ್ತೊಂದು ಗರಿಮೆ ತಂದಿದೆ.

## ಪರಿಷತ್ ನೂತನ ಪದಾಧಿಕಾರಿಗಳಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಳಿಕೋಟಿ ತಾಲೂಕ ಘಟಕ, ಯುವ ಘಟಕ ಹಾಗೂ ಕದಳಿ ವೇದಿಕೆ ವತಿಯಿಂದ ಶ್ರಾವಣ ಮಾಸದ ನಿಮಿತ್ಯವಾಗಿ ಹಮ್ಮಿಕೊಂಡ ವಚನ ಶ್ರಾವಣ ಹಾಗೂ ಶರಣ ಸಾಹಿತ್ಯ ಪರಿಷತ್, ಕದಳಿ ವೇದಿಕೆ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಡಾ. ವಿ. ಎಸ್.ಕಾರ್ಚಿ, ಯುವ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಕಾಶಿನಾಥ ಸಜ್ಜನ ಹಾಗೂ ಕದಳಿ ವೇದಿಕೆ ಅಧ್ಯಕ್ಷೆಯಾಗಿ ಆಯ್ಕೆಯಾದ ಉಮಾ ಗಂಗಾಧರ ಸಾಲಂಕಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು.**

ಶರಣ ಸಾಹಿತ್ಯ ಪರಿಷತ್ತು



ವಿಜಯಪುರ ಜಿಲ್ಲಾಧ್ಯಕ್ಷ ಜಂಬುನಾಥ ಕಂಚಾಣಿ, ಮಾಜಿ ಅಧ್ಯಕ್ಷ ಮ.ಗು. ಯಾದವಾಡ, ಕದಳಿ ವೇದಿಕೆ ನಿಕಟ ಪೂರ್ವ ಅಧ್ಯಕ್ಷೆ ಉಮಾ ಫಿವಾರಿ,ಗಣ್ಯ ವರ್ತಕರಾದ ಮಹಾದೇವಪ್ಪ ಕುಂಬಾರ, ಎಂ.ಎಸ್.ನಾಗರಾಳ, ಸಮಾಜ ಸೇವಕ ಇಬ್ರಾಹಿಂ ಮನ್ನೂರ, ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಸಾಹೇಬಗೌಡ ಬಿರಾದಾರ, ಜಗದೀಶ ಬಿಳೇಭಾವಿ, ಗಂಗಾಧರ ಕಸ್ತೂರಿ, ಆರ್. ಬಿ.ದಮ್ಮೂರಮಠ, ಮಹಾಂತೇಶ ಮುರಾಳ, ಗುಂಡೂರಾವ ಧನಪಾಲ, ಅಶೋಕ ಚಿನಗುಡಿ, ಶಿಕ್ಷಕ ಸಿದ್ದು ಕರಡಿ, ಕಾಶಿನಾಥ ಕಾರಗನೂರ, ಪರಿಷತ್ತು ಹಾಗೂ ಕದಳಿ ವೇದಿಕೆ ಪದಾಧಿಕಾರಿಗಳು ಮತ್ತು ಬಸವಾಭಿಮಾನಿಗಳು ಉಪಸ್ಥಿತರಿದ್ದರು.

## ಅಭಿವೃದ್ಧಿ ಕಾಮಗಾರಿಗೆ ಆದ್ಯತೆ: ಶಾಸಕ ದೊಡ್ಡನಗೌಡ ಪಾಟೀಲ

ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಗತ್ಯ ಮೂಲಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದೆ ಎಂದು ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.**

ತಾಲೂಕಿನ ಬ್ಯಾಲಿಹಾಳ ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ, ಚರಂಡಿ ನಿರ್ಮಾಣ ಹಾಗೂ ಕುಷ್ಟಗಿ?ಗಜೇಂದ್ರಗಡ ಮುಖ್ಯ ರಸ್ತೆಯಿಂದ ಯಲಬುರ್ತಿ ಮುಖ್ಯ ರಸ್ತೆವರೆಗೆ ರಸ್ತೆ ಅಭಿವೃದ್ಧಿಪಡಿಸುವ 3 ಕೋಟಿ ಮೊತ್ತದ ಮಹತ್ವದ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ರಸ್ತೆ ಸಂಪರ್ಕ ಕಲ್ಪಿಸುವುದರಿಂದ ಜನರ ಸಂಚಾರಕ್ಕೆ ಅನುಕೂಲವಾಗುವುದರ ಜೊತೆಗೆ ಸ್ಥಳೀಯ ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ದೊರೆಯಲಿದೆ. ಬ್ಯಾಲಿಹಾಳ ಗ್ರಾಮದ ರಸ್ತೆ ಹಾಗೂ ಚರಂಡಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಈ ಕಾಮಗಾ-



ರಿಯನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

2025?26ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅನುದಾನದಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ?3 ಕೋಟಿ ಅಂದಾಜು ಮೊತ್ತ ನಿಗದಿಪಡಿಸಲಾಗಿದೆ. ಗ್ರಾಮದ ರಸ್ತೆ ಸಂಪರ್ಕ ಸುಧಾರಣೆ, ಸುಗಮ ಸಂಚಾರ ಹಾಗೂ ಅಗತ್ಯ ಮೂಲಸೌಕರ್ಯ ಅಭಿವೃದ್ಧಿಗೆ ಈ ಕಾಮಗಾರಿ ಸಹಕಾರಿಯಾಗಲಿದೆ. ಕ್ಷೇತ್ರದಲ್ಲಿ ರಸ್ತೆ, ಚರಂಡಿ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಾಮಗಾರಿಗಳು ಹಂತ ಹಂತವಾಗಿ ನಡೆಯುತ್ತಿವೆ ಎಂದು ಶಾಸಕ ದೊಡ್ಡನಗೌಡ ಪಾಟೀಲ ತಿಳಿಸಿದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಇಲಾಖೆಯ ಎಇಇ ಸುಧಾಕರ ಕಾತರಕಿ, ಸಂಗನಗೌಡ ಜೈನರ್, ಪ್ರಕಾಶಗೌಡ ಬೆದವಟ್ಟಿ, ರಾಮಚಂದ್ರಪ್ಪ ಬಡಿಗೇರ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಪ್ರಕೃತಿಯ ಮಡಿಲಲ್ಲಿ

ಹರಿಯುವ ಹೊಳೆಯ ತಂಪು ನೀರಲಿ,
ಮೀನಿನಾಟದ ಚೆಲುವು ಕಾಣುತ,
ಚಿಟ್ಟೆಗಳ ಬಣ್ಣದ ರೆಕ್ಕೆಗಳಲಿ,
ಪ್ರಕೃತಿಯ ಸೌಂದರ್ಯ ನಲಿಯುತ.

ಕೋಗಿಲೆಯ ಕೂಗು ಕಿವಿಗೆ ಇಂಪು,
ನವಿಲಿನ ನೃತ್ಯ ಕಣ್ಣಿಗೆ ಹಬ್ಬ,
ಮರಗಳ ಎಲೆಗಳ ಸರಸರ ನಾದ,
ಮನದೊಳಗೆ ಮೂಡಿಸುವ ಹೊಸ ಉಲ್ಲಾಸ.

ಸೂರ್ಯೋದಯದ ಹೊಂಗಿರಣ,
ಸಂಜೆಯ ಹೊತ್ತಿನ ಕೆಂಪು ಬಾನು,
ಪ್ರಕೃತಿಯ ಪ್ರತಿಯೊಂದು ಕ್ಷಣವೂ,
ಜೀವನಕ್ಕೆ ನೀಡುವುದು ಹೊಸ ಚೈತನ್ಯ.

ಮಳೆ ಹನಿಗಳ ಮುತ್ತಿನ ಹಾರ,
ಭೂಮಿಯ ತಾಯಿಗೆ ಹೊಸ ಅಲಂಕಾರ,
ಹಸಿರು ಹೊದಿಕೆಯಲಿ ನಗುತಿರುವ ಭೂಮಿ,
ನಮ್ಮ ಬದುಕಿನ ನಿಜವಾದ ಸಿರಿ.

ಪ್ರಕೃತಿಯ ಮಡಿಲಲ್ಲಿ ಬೆಳೆದ ನಾವು,
ಅದರ ಋಣವನ್ನು ಮರೆಯದಿರೋಣ,
ಮರ?ಗಿಡ, ನದಿ?ಬೆಟ್ಟ ಕಾಪಾಡಿ,
ಸುಂದರ ಭವಿಷ್ಯವನ್ನು ಕಟ್ಟೋಣ.

## ಡಾ. ವಿಷ್ಣುವರ್ಧನ ಪ್ರಶಸ್ತಿಗೆ ಸುನೀಲ ಕುಮಾರ ಎನ್. ಮಧುರಕರ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ಪಟ್ಟಣದ ಸುನೀಲ ಕುಮಾರ ಎನ್. ಮಧುರಕರ ಅವರ ಗಾಯನ, ಸಂಗೀತ ಹಾಗೂ ಸಮಾಜ ಸೇವೆಯನ್ನು ಗುರುತಿಸಿ ಸೌರಭ ಸಾಂಸ್ಕೃತಿಕ ಕಲಾ ಬಳಗದ ವತಿಯಿಂದ ಡಾ. ವಿಷ್ಣುವರ್ಧನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.**



ಆ. 22ರಂದು ಕುಷ್ಟಗಿ ಪಟ್ಟಣದ ಶ್ರೀ ಮಲ್ಲಿಕಾರ್ಜುನ ಮಂಗಲ ಭವನದಲ್ಲಿ ನಡೆಯಲಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕ–ರಿಗೆ ಸನ್ಮಾನ ಸಮಾರಂಭದಲ್ಲಿ ಸುನೀಲ ಕುಮಾರ ಎನ್. ಮಧುರಕರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕಲಾ ಬಳಗದ ಅಧ್ಯಕ್ಷ ರೆಹೆಮಾನಸಾಬ್ ಕೋಳೂರು ತಿಳಿಸಿದ್ದಾರೆ. ಸಮಾರಂಭದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುವುದು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

## ಇಂದಿರಾ ಕ್ಯಾಂಟೀನ್ ಮುಂಭಾಗ ಅಪರಿಚಿತ ವ್ಯಕ್ತಿ ಸಾವು ಸಮಾಜ ಸೇವಕರಿಂದ ಶವಗಾರಕ್ಕೆ ಮೃತದೇಹ ರವಾನೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಇಂದಿರಾ ಕ್ಯಾಂಟೀನ್ ಮುಂಭಾಗದಲ್ಲಿ ಅಪರಿಚಿತ ವ್ಯಕ್ತಿ ಅನಾರೋಗ್ಯದಿಂದ ಸಾವನ್ನಪ್ಪಿದ ಶವ ಇಂದು ಕಂಡುಬಂದಿದ್ದು ಘಟನಾ ಸ್ಥಳಕ್ಕೆ ಪೊಲೀಸ್ ಸಿಬ್ಬಂದಿಗಳು ಆಗಮಿಸಿ ಸಾರ್ವಜನಿಕರ ಸಮ್ಮುಖದಲ್ಲಿ ವಿಚಾರಣೆ ನಡೆಸಿದಾಗ ಮೃತರ ಗುರುತು ಪತ್ತೆಯಾಗಿರಲಿಲ್ಲ.**




ಆದ ಕಾರಣ ಶ್ರೀ ಷಾ ಮಕಂದಾರ್ ಜನಪರ ಸೇವಾ ಸಮಿತಿ ಸಿಂಧನೂರಿನ ಸಮಾಜ ಸೇವಕರಾದ ಉಸ್ಮಾನ್ ಪಾಷಾ ಷಾ ಮಕಂದಾರ್ ರವರು ವ್ಯಕ್ತಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆ (Post Mortem)ಗಾಗಿ ಸಿಂಧನೂರು ತಾಲೂಕು ಸಾರ್ವಜನಿಕ ಆಸ್ಪತ್ರೆಯ ಶವಗಾರ ಕೊಠಡಿಗೆ ಮೃತ ವ್ಯಕ್ತಿಯ ದೇಹವನ್ನು ಸ್ಥಳಾಂತರಿಸಿ ಒಂದು ಸಣ್ಣ ಸಮಾಜ ಸೇವೆಗೆ ಪಾತ್ರರಾಗಿದ್ದಾರೆ, ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು

# ಸಮಾಜಮುಖಿ ಕಾರ್ಯಗಳೊಂದಿಗೆ ರಾಜಾ ವೆಂಕಟಪ್ಪ ನಾಯಕ ಹುಟ್ಟುಹಬ್ಬ ಆಚರಣೆ

## ರೋಗಿಗಳಿಗೆ ಹಣ್ಣುಹಂಪಲು, ಅನಾಥಾಶ್ರಮ ಅಂಧ ಮಕ್ಕಳ ಶಾಲೆಯಲ್ಲಿ ಅನ್ನಸಂತರ್ಪಣೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ವಿ ವಿಧಾನಸಭಾ ಕ್ಷೇತ್ರದ ನಿಕಟಪೂರ್ವ ಶಾಸಕರಾದ ರಾಜಾ ವೆಂಕಟಪ್ಪ ನಾಯಕ ಅವರ ಹುಟ್ಟುಹಬ್ಬವನ್ನು ವಿವಿಧ ಸಮಾಜಮುಖಿ ಕಾರ್ಯಕ್ರಮಗಳೊಂದಿಗೆ ಸರಳವಾಗಿ ಆಚರಿಸಲಾಯಿತು.**

ಹುಟ್ಟುಹಬ್ಬದ ಪ್ರಯುಕ್ತ ತಾಲೂಕು ಸಾರ್ವಜನಿಕ ಆಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿನ ರೋಗಿಗಳಿಗೆ ಹಣ್ಣುಹಂಪಲು ವಿತರಿಸಲಾಯಿತು. ಬಳಿಕ ನೆರಳು ಅನಾಥಾಶ್ರಮ ಹಾಗೂ ಶ್ರೀ ಚನ್ನಬಸವೇಶ್ವರ ಅಂಧ ಮಕ್ಕಳ ಶಾಲೆಗೆ ಭೇಟಿ ನೀಡಿ ಮಕ್ಕಳೊಂದಿಗೆ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಮಕ್ಕಳಿಗೆ ಅನ್ನಸಂತರ್ಪಣೆ ಮಾಡಲಾಯಿತು.

ನಂತರ ನಿವಾಸದಲ್ಲಿ ಅಭಿಮಾನಿಗಳು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಸಮ್ಮುಖದಲ್ಲಿ ಹುಟ್ಟುಹಬ್ಬದ ಕಾರ್ಯಕ್ರಮ



ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ರಾಜಾ ವೆಂಕಟಪ್ಪ ನಾಯಕ, ಕಳೆದ ಮೂರು ವರ್ಷಗಳಿಂದ ಹುಟ್ಟುಹಬ್ಬವನ್ನು ಆಚ–ರಿಸಿಕೊಂಡಿರಲಿಲ್ಲ. ಆದರೆ ಈ ಬಾರಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಒತ್ತಾಯದ ಮೇರೆಗೆ ಸರಳವಾಗಿ ಹುಟ್ಟುಹಬ್ಬ ಆಚರಿಸಲಾಗುತ್ತಿದೆ ಎಂದು ಹೇಳಿದರು. ತಾವು ಶಾಸಕರಾಗಿದ್ದ ಅವಧಿಯಲ್ಲಿ ಮಾನ್ವಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗೊಂಡ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಸ್ಮ–ರಿಸಿದ ಅವರು, ಜನರ ಆಶೀರ್ವಾದ ಹಾಗೂ ಕಾರ್ಯಕರ್ತರ ಬೆಂಬಲದೊಂದಿಗೆ 2028ರಲ್ಲಿ ಮತ್ತೆ ಶಾಸಕರಾಗುವುದು ಶತಸಿದ್ಧ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಯುವ ಘಟಕದ ಉಪಾಧ್ಯಕ್ಷ ರಾಜಾ ರಾಮಚಂದ್ರ ನಾಯಕ, ಮಾನ್ವಿ ತಾಲೂಕು ಅಧ್ಯಕ್ಷ ಈರಣ್ಣ ಮರ್ಲಟ್ಟಿ, ಸಿರವಾರ ತಾಲೂಕು ಅಧ್ಯಕ್ಷ ಟಿ. ಮಲ್ಲಿಕಾರ್ಜುನ ಪಾಟೀಲ್ ಬಲ್ಲಟಗಿ, ನಗರ ಘಟಕದ ಅಧ್ಯಕ್ಷ ಎಚ್. ಮೌನೇಶ್ ಗೌಡ, ರೈತ ಘಟಕದ ಅಧ್ಯಕ್ಷ ಶರಣಪ್ಪಗೌಡ ಮದ್ಲಾಪುರ್, ಮುಖಂಡರಾದ ಬಾಷಸಾಬ್, ಶರಣಪ್ಪ ಮೇದಾ, ನಾಗರಾಜ್ ಬೋಗಾವತಿ, ರಾಜಾ ಆದರ್ಶ ನಾಯಕ, ಜಿ. ಲೋಕರೆಡ್ಡಿ, ಪಿ. ರವಿಕುಮಾರ್, ವಿಜಯಲಕ್ಷ್ಮೀ, ಸರ್ವಮಂಗಳ, ಎಂ.ಡಿ. ಉಸ್ಮಾನ್, ಮೌಲಸಾಬ್, ಸುಬಾನ್ ಬೇಗ್, ಶ್ರೀಧರ್ ಸ್ವಾಮಿ, ದಾನಪ್ಪ, ಸೂಗುರೇಶ ಹಿರೇಮಠ ಸೇರಿದಂತೆ ಅನೇಕ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಶ್ರೀಮಂತರಾಗುವುದು ಸುಲಭ..
## ಉತ್ತಮ ಮಕ್ಕಳಾಗುವುದು ಕಷ್ಟ.....

ನೈಜ್ಯ ದೆಸೆ ವಿಶೇಷ

ನಮಸ್ಕಾರ ಕನ್ನಡಿಗರಿಗೆ
ಉಚಿಟಿರಿಂಚಿ' ಬರಹಗಳು
ಬರಹಗಳಲ್ಲಿ ಭಾವನೆ... ಭಾವನೆಗಳಲ್ಲಿ ಬದುಕು...

ಪ್ರತಿಯೊಂದು ಮನೆಯ ಸಂತೋಷ, ಸುಖ ಮತ್ತು ಶಾಂತಿಯ ಮೂಲವೇ ತಂದೆ–ತಾಯಿ. ಅವರು ಸಂತೋಷವಾಗಿದ್ದರೆ ಮನೆಯ ವಾತಾವರಣವೂ ಸಂತೋಷದಿಂದ ತುಂಬಿರುತ್ತದೆ.

ಪ್ರತಿಯೊಬ್ಬರ ಜೀವನದಲ್ಲಿ ಪೋಷಕರ ಪಾತ್ರ ಅತ್ಯಮೂಲ್ಯ. ಅವರ ತ್ಯಾಗ, ಪ್ರೀತಿ ಮತ್ತು ಜೀವನ ಪಾಠಗಳನ್ನು ಅರ್ಥಮಾಡಿಕೊಂಡು ಬದುಕಿದರೆ ನಮ್ಮ ಬದುಕು ಸುಂದರವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ನಾನು ಗಮನಿಸಿದ ಕೆಲವು ಘಟನೆಗಳು ತುಂಬಾ ಬೇಸರ ಉಂಟುಮಾಡಿವೆ.




ಗಂಗಾಶ್ರೀ ವಿಶ್ವಕರ್ಮ ಮಾನ್ವಿ

ಕೆಲವರು ಆರ್ಥಿಕವಾಗಿ ಶ್ರೀಮಂತರಾದರೂ, ಮದುವೆಯಾದ ನಂತರ ತಮ್ಮ ಹೆತ್ತವರನ್ನು ವೃದ್ಧಾಶ್ರಮಕ್ಕೆ ಸೇರಿಸುವುದು ಅಥ–'ವಾ ಮನೆಯಲ್ಲೇ ನಿರ್ಲಕ್ಷ್ಯದಿಂದ ನಡೆಸಿಕೊಳ್ಳುವುದು ನಿಜಕ್ಕೂ ನೋವಿನ ಸಂಗತಿ. ನಾವು ವಿದ್ಯಾಭ್ಯಾಸದಲ್ಲಿ, ಸಂಪತ್ತಿನಲ್ಲಿ ಮತ್ತು ಸ್ಥಾನಮಾನದಲ್ಲಿ ದೊಡ್ಡವರಾಗುವುದರ ಜೊತೆಗೆ ಗುಣ, ಸಂಸ್ಕಾರ ಮತ್ತು ಮಾನವೀಯತೆಯಲ್ಲಿಯೂ ದೊಡ್ಡವರಾಗಬೇಕು.

ಕೆಲವರು ತಮ್ಮ ಹೆತ್ತವರನ್ನು ಹೊರೆ ಎಂದು ಭಾವಿಸುತ್ತಾರೆ. ಆದರೆ ಅದೇ ಮನೆಯಲ್ಲಿ ಸಾಕು ಪ್ರಾಣಿಗಳಿಗೆ ಸಮಯಕ್ಕೆ ಸರಿಯಾಗಿ ಆಹಾರ ನೀಡಿ, ಅಪಾರ ಪ್ರೀತಿ ಮತ್ತು ಕಾಳಜಿಯಿಂದ ನೋಡಿಕೊಳ್ಳುತ್ತಾರೆ. ಪ್ರಾಣಿಗಳನ್ನು ಪ್ರೀತಿಸುವುದು ತಪ್ಪಲ್ಲ. ಆದರೆ ನಮ್ಮನ್ನು ಹೆತ್ತು, ಹೊತ್ತು, ಬೆಳೆಸಿ, ವಿದ್ಯೆ ಕಲಿಸಿ, ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ರೂಪಿಸಿದ ತಂದೆ–ತಾಯಿಯ ಸ್ಥಾನ ಅದಕ್ಕಿಂತಲೂ ಶ್ರೇಷ್ಠ. ಆದ್ದರಿಂದ ಅವರ ಕೊನೆಯ ಉಸಿರಿರುವವರೆಗೂ ಪ್ರೀತಿ, ಗೌರವ ಮತ್ತು ಕಾಳಜಿಯಿಂದ ನೋಡಿಕೊಳ್ಳುವುದು ಪ್ರತಿಯೊಬ್ಬ ಮಗ–ಮಗಳ ಕರ್ತವ್ಯ.

ಬಡವರಾಗಿದ್ದರೂ ಅನೇಕರು ತಮ್ಮ ಹೆತ್ತವರಿಗೆ ಗಂಜಿಯನ್ನಾದರೂ ನೀಡಿ ಪ್ರೀತಿಯಿಂದ ನೋಡಿಕೊಳ್ಳುತ್ತಾರೆ. ಏಕೆಂದರೆ ಅವರಿಗೆ ತಂದೆ–ತಾಯಿಯ ಮೌಲ್ಯ ಗೊತ್ತಿರುತ್ತದೆ. ಹಣದ ಅಹಂಕಾರ ಮನುಷ್ಯನನ್ನು ಎಷ್ಟೇ ಎತ್ತರಕ್ಕೆ ಕೊಂಡೊಯ್ದರೂ, ಮಾನವೀಯತೆ ಇಲ್ಲದಿದ್ದರೆ ಆ ಎತ್ತರಕ್ಕೆ ಯಾವುದೇ ಅರ್ಥವಿಲ್ಲ.

ಹೆತ್ತ ತಂದೆ–ತಾಯಿ,
ಹೊತ್ತ ಭೂಮಿ,
ವಿದ್ಯೆ ಕಲಿಸಿದ ಗುರು,
ಹಸಿದಾಗ ತುತ್ತು ಅನ್ನ ನೀಡಿದ ಕೈ...
ಇವರ ಋಣವನ್ನು ಜೀವನಪೂರ್ತಿ ತೀರಿಸಲು ಸಾಧ್ಯವಿಲ್ಲ.

ಹೆತ್ತವರ ಸೇವೆಯೇ ಬದುಕಿನ ಶ್ರೇಷ್ಠ ಧರ್ಮ ಯಾವ ಧರ್ಮವಾದರೂ ಇದನ್ನೇ ಬೋಧಿಸುವುದು. ನಾವು ಅರ್ಥ ಮಾಡಿಕೊಂಡು ಬಾಳಬೇಕು.

# ನಗರಸಭೆ ಸಿಂಧನೂರಿನಲ್ಲಿ ವಿಶೇಷ ಆಯುಷ್ ಶಿಬಿರ ಯಶಸ್ವಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಆಯುಷ್ ಇಲಾಖೆ ರಾಯಚೂರು ಹಾಗೂ ಸರಕಾರಿ ಯುನಾನಿ ಚಿಕಿತ್ಸಾಲಯ ಸಿಂಧನೂರು ವತಿಯಿಂದ ರಾಷ್ಟ್ರೀಯ ಆಯುಷ್ ಅಭಿಯಾನ (2026–27) ಯೋಜನೆಯಡಿ ನಗರಸಭೆ ಸಿಂಧನೂರಿನಲ್ಲಿ ಉಚಿತ ವಿಶೇಷ ಆಯುಷ್ ಆರೋಗ್ಯ ಶಿಬಿರವನ್ನು ಬುಧವಾರ ಯಶಸ್ವಿಯಾಗಿ ಆಯೋಜಿಸಲಾಯಿತು.**

ಶಿಬಿರದ ಅಂಗವಾಗಿ ನಗರಸಭೆಯ ಸಿಬ್ಬಂದಿಗೆ ಉಚಿತ ಆರೋಗ್ಯ ತಪಾಸಣೆ, ವೈದ್ಯಕೀಯ ಸಲಹೆ ಹಾಗೂ ಅಗತ್ಯ ಚಿಕಿತ್ಸೆಯನ್ನು ನೀಡಲಾಯಿತು. ಜೊತೆಗೆ ರಕ್ತದೊತ್ತಡ (ಬಿಪಿ) ಮತ್ತು ಮಧುಮೇಹ (ಶುಗರ್) ಪರೀಕ್ಷೆ ನಡೆಸಿ, ಅಗತ್ಯವಿರುವವರಿಗೆ ಉಚಿತ ಔಷಧಗಳನ್ನುವಿತ–ರಿಸಲಾಯಿತು. ಕಾರ್ಯಕ್ರಮದಲ್ಲಿ ವೇದಿಕೆಯ ಅತಿಥಿಗಳನ್ನು ಪುಸ್ತಕ ನೀಡಿ ಗೌರವಪೂರ್ವಕವಾಗಿ ಸ್ವಾಗತಿಸಲಾಯಿತು. ಜಿಲ್ಲಾ ಆಯುಷ್ ಅಧಿಕಾ–ರಿಗಳಾದ ಡಾ. ಶಂಕರಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿಶೇಷ ಆಯುಷ್ ಶಿಬಿರದ ಉದ್ದೇಶ ಹಾಗೂ ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಆಯುಷ್ ಚಿಕಿತ್ಸಾ ಪದ್ಧತಿಗಳ ಮಹತ್ವವನ್ನುವಿವರಿಸಿದರು. ವೈದ್ಯಾಧಿಕಾರಿ ಡಾ. ಶಂಕರಗೌಡ ಎಸ್. ಪಾಟೀಲ್ ಅವರು ಆಯುರ್ವೇದ ಚಿಕಿತ್ಸಾ




ಪದ್ಧತಿ, ಅದರ ಪ್ರಯೋಜನಗಳು ಹಾಗೂ ಆರೋಗ್ಯ ಸಂರಕ್ಷಣೆಯಲ್ಲಿ ಆಯುರ್ವೇದದ ಪಾತ್ರದ ಕುರಿತು ಮಾಹಿತಿ ನೀಡಿದರು. ವೈದ್ಯಾಧಿಕಾರಿ ಡಾ. ಅಮ್ಜದ್ ಶರೀಫ್ ಅವರು ಆಯುಷ್‌ನ ವಿವಿಧ ಚಿಕಿತ್ಸಾ ಪದ್ಧತಿಗಳನ್ನು ಪರಿಚಯಿಸುವುದರೊಂದಿಗೆ ಕಾರ್ಯಕ್ರಮವನ್ನು ನಿರೂಪಿಸಿದರು.

ಈ ಸಂದರ್ಭದಲ್ಲಿ ನಗರಸಭೆ ವ್ಯವಸ್ಥಾಪಕರಾದ ಶರಣಬಸವ ಅವರು ಮಾತನಾಡಿ, ಶಿಬಿರವು ನಗರಸಭೆಯ ಸಿಬ್ಬಂದಿಗೆ ಅತ್ಯಂತ ಉಪಯುಕ್ತವಾಗಿದ್ದು, ಆರೋಗ್ಯದ ಕುರಿತು ಜಾಗೃತಿ ಮೂಡಿಸುವಲ್ಲಿ ಸಹಕಾ–ರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿಗಳಾದ ಡಾ. ರಾಜೇಂದ್ರ, ಡಾ. ದುರುಗಪ್ಪ, ಡಾ. ಫೌಝಿಯಾ ಬೇಗಂ ಹಾಗೂ ಡಾ. ನಬಿ, ನಗರಸಭೆ ವ್ಯವಸ್ಥಾಪಕರಾದ ಚೇತನ್ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಶುಶ್ರೂಷಾಧಿಕಾರಿಗಳಾದ ರಾಜಪ್ಪ ಮತ್ತು ನಿಂಗಮ್ಮ ಅವರು ಸಿಬ್ಬಂದಿಗೆ ಬಿಪಿ ಹಾಗೂ ಮಧುಮೇಹ ಪರೀಕ್ಷೆ ನಡೆಸಿದರು. ಫಾರ್ಮಸಿ ಅಧಿಕಾರಿಗಳಾದ ಭಾರ್ಗವ, ನಂದಕಿಶೋರ್ ಹಾಗೂ ಹರ್ಷವರ್ಧನ ಅವರು ಅಗತ್ಯ ಔಷಧಗಳನ್ನು ಉಚಿತವಾಗಿ ವಿತ–ರಿಸಿದರು.

ನಗರಸಭೆ ಸಿಬ್ಬಂದಿಗಳಾದ ಕಿಶನ್ ರಾವ್, ಜಗದೀಶ್, ವಿಶ್ವನಾಥ, ಖಲಂದರ್ ಹಾಗೂ ಪ್ರವೀಣ ಸೇರಿದಂತೆ ಸಿಬ್ಬಂದಿ ಶಿಬಿರದ ಯಶಸ್ವಿ ಆಯೋಜನೆಗೆ ಸಹಕರಿಸಿದರು.

ಆಯುಷ್ ಇಲಾಖೆಯ ವತಿಯಿಂದ ಇಂತಹ ಉಚಿತ ಆರೋಗ್ಯ ಶಿಬಿರಗಳ ಮೂಲಕ ಸಾರ್ವಜನಿಕರು ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿಯಲ್ಲಿ ಆರೋಗ್ಯ ಜಾಗೃತಿ ಮೂಡಿಸುವುದು ಮತ್ತು ಆಯುಷ್ ಚಿಕಿತ್ಸಾ ಪದ್ಧತಿಗಳ ಪ್ರಯೋಜನಗಳನ್ನು ಜನರಿಗೆ ತಲುಪಿಸುವ ಕಾರ್ಯ ಮುಂದುವರಿಯಲಿದೆ ಎಂದುತಿಳಿಸಲಾಯಿತು. ಶಿಬಿರದ ಯಶಸ್ವಿ ಆಯೋಜನೆಗೆ ಸಹಕರಿಸಿದ ಎಲ್ಲಾ ವೈದ್ಯಾಧಿಕಾ–ರಿಗಳು, ಆರೋಗ್ಯ ಸಿಬ್ಬಂದಿ, ನಗರಸಭೆ ಅಧಿಕಾ–ರಿಗಳು ಹಾಗೂ ಸಿಬ್ಬಂದಿಗೆ ಆಯುಷ್ ಇಲಾಖೆಯ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು.

# ಮೂರು ವರ್ಷದಿಂದ KBJNL ಅಧಿಕಾರಿಗಳ ನಿರ್ಲಕ್ಷ್ಯ: ಮೆದಿನಾಪುರ ಕಾಲುವೆ ಹಾಳು, ರೈತರ ಆಕ್ರೋಶ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ/ದೇವದುರ್ಗ, ಆ.19: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಮೆದಿನಾಪುರ ಗ್ರಾಮದಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ (ಏಃಎಓಐ) ಅಧಿಕಾ–ರಿಗಳ ನಿರ್ಲಕ್ಷ್ಯದಿಂದ ಕಾಲುವೆ ಹಾಳಾಗಿದ್ದು, ನೀರಿನ ಕೊರತೆಯಿಂದ ನೂರಾರು ಎಕರೆ ಜಮೀನಿನ ಬೆಳೆಗಳು ಒಣಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಮೆದಿನಾಪುರ ಗ್ರಾಮದ ಃಆ–2/9 ಐಚಿಣಜಡಿಚಿಟ–10 ಕಾಲುವೆಯ ಸುಮಾರು ನಾಲ್ಕು ಕಿಲೋಮೀಟರ್ ವ್ಯಾಪ್ತಿಯಲ್ಲಿ ಕಾಲುವೆ ಹದಗೆಟ್ಟಿದ್ದು, ಹಲವು ಕಡೆ ಡ್ರಾಪ್ ಹಾಗೂ ಸಿಡಿಗಳು ಕಿತ್ತುಹೋಗಿವೆ. ಇದರಿಂದ ನೀರು ಪೋಲಾಗುತ್ತಿದ್ದು, ಸುಮಾರು 400ರಿಂದ 450 ಎಕರೆ ಜಮೀನಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ ಎಂದು ರೈತರು ತಿಳಿಸಿದ್ದಾರೆ.

ಕಾಲುವೆಯ ಸಮಸ್ಯೆ ಕುರಿತು ಏಃಎಓಐ ಇಂಜಿನಿಯರ್ ಶ್ರೀಧರ್ ಹಾಗೂ ಂಇಇ ಭಜಂತ್ರಿ



ಅವರ ಗಮನಕ್ಕೆ ಹಲವು ಬಾರಿ ತಂದರೂ ಇದುವರೆಗೆ ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ರೈತರು ಆರೋಪಿಸಿದ್ದಾರೆ. ಮಳೆಯ ಕೊರತೆಯ ನಡುವೆಯೇ ಕಾಲುವೆ ನೀರು ಕೂಡ ಸಿಗದ ಕಾರಣ ಬೆಳೆಗಳು ಒಣಗುತ್ತಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಒಂದು ವಾರದ ಗಡುವು

ರೈತ ನಾಯಕ ಭೀಮರಾಯ ಪೂಜಾರಿ ಮಾತನಾಡಿ, "ಅಧಿಕಾರಿಗಳು ಹಾಗೂ ಶಾಸಕರ ನಿರ್ಲಕ್ಷ್ಯದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಂದು ವಾರದೊಳಗೆ ಕಾಲುವೆ ದುರಸ್ತಿ ಮಾಡದಿದ್ದರೆ ಗ್ರಾಮದ ಎಲ್ಲ ರೈತರು ಕುಟುಂಬ ಹಾಗೂ ದನ–ಕರುಗಳೊಂದಿಗೆ ಏಃಎಓಐ ಕಚೇರಿ ಮುಂದೆ

### ವಿಕಾಮಗಾರಿ ಟೆಂಡರ್ ಹಂತದಲ್ಲಿದೆ: ಇಂಜಿನಿಯರ್ಹಿ

ಕೆ ಬಿ ಜೆ ಎನ್ ಎಲ್ ಇಂಜಿನಿಯರ್ ಶ್ರೀಧರ್ ಪ್ರತಿಕ್ರಿಯಿಸಿ, "ಲ್ಯಾಟರಲ್ ಕಾಲುವೆ ಕಾಮಗಾರಿ ಟೆಂಡರ್ ಹಂತದಲ್ಲಿದೆ. ಕೂಡಲೇ ದುರಸ್ತಿ ಕಾಮಗಾರಿ ಕೈಗೊಳ್ಳಲಾಗುವುದು" ಎಂದು ತಿಳಿಸಿದ್ದಾರೆ.

ಧರಣಿ ನಡೆಸಬೇಕಾಗುತ್ತದೆ" ಎಂದು ಎಚ್ಚರಿಸಿದರು.

ಗ್ರಾಮದ ಮುಖಂಡ ವಾಸುದೇವ ಬಡಿಗೇರ್ ಮಾತನಾಡಿ, "ಮಳೆಯೂ ಇಲ್ಲ, ಕಾಲುವೆಯಲ್ಲೂ ನೀರು ಬರುತ್ತಿಲ್ಲ. ರೈತರ ಬೆಳೆಗಳು ಒಣಗುತ್ತಿವೆ. ಕೂಡಲೇ ಕಾಲುವೆ ದುರಸ್ತಿ ಮಾಡದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು" ಎಂದರು. ರೈತ ಸಿದ್ದಲಿಂಗಪ್ಪ ಕರಡಿಗುಡ್ಡ ಮಾತನಾಡಿ, "ಶಾಸಕರ ನಿರ್ಲಕ್ಷ್ಯದಿಂದ ಕಾಲುವೆ ಹಾಳಾಗಿದ್ದು, ಈ ಕುರಿತು ಕೂಡಲೇ ಗಮನಹರಿಸಬೇಕು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು, ಹಾಳಾಗಿರುವ ಕಾಲುವೆಯನ್ನು ತಕ್ಷಣ ದುರಸ್ತಿ ಮಾಡಿ ರೈತರ ಹೊಲಗಳಿಗೆ ನೀರು ಹರಿಸುವ ವ್ಯವಸ್ಥೆ ಮಾಡಬೇಕು" ಎಂದು ಒತ್ತಾಯಿಸಿದರು.

### ವಿದುರಸ್ತಿಗೆ ಕ್ರಮ: AEE ಭಜಂತ್ರಿಹಿ

AEE ಭಜಂತ್ರಿ ಮಾತನಾಡಿ, "ಹಾಳಾಗಿರುವ ಕಾಲುವೆ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, ದುರಸ್ತಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು" ಎಂದು ಭರವಸೆ ನೀಡಿದ್ದಾರೆ.

### ವಿಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಹಿ

ಊರಿನ ಮುಖಂಡ ಅಮರೇಶ್ ಪಾಟೀಲ್ ಮಾತನಾಡಿ, "ಅಧಿಕಾರಿಗಳ ನಿರ್ಲಕ್ಷ್ಯದಿಂದ ಸುಮಾರು 300ರಿಂದ 400 ಎಕರೆ ಬೆಳೆ ಹಾನಿಯಾಗಿದೆ. ಮೂರು ವರ್ಷಗಳಿಂದ ಸಮಸ್ಯೆ ಬಗೆಹರಿಸದೆ ನಿರ್ಲಕ್ಷ್ಯ ವಹಿಸಿರುವ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು" ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಗ್ರಾಮದ ಪ್ರಮುಖರಾದ ಭೀಮರಾಯ ಪೂಜಾರಿ, ಹನುಮರೆಡ್ಡಿ ಸಾಹುಕಾರ್, ವಾಸುದೇವ ಬಡಿಗೇರ್, ಅಮರೇಶ್ ಪಾಟೀಲ್, ಶಿವರಾಜ್, ಲಕ್ಷ್ಮಿ ರೆಡ್ಡಿ ಸಾಹುಕಾರ್, ಗ್ರಾಮ ಪಂಚಾಯಿತಿ ಸದಸ್ಯ ಸಿದ್ದರಾಮ ಸೇ–ರಿದಂತೆ ಹಲವು ರೈತರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**UPSC ನೇಮಕಾತಿ 2026 ? 80 ಸಹಾಯಕ ಭವಿಷ್ಯ ನಿಧಿ ಆಯುಕ್ತ (Assistant Provident Fund Commissioner) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 19 ಆಗಸ್ಟ್ 2026**

UPSC ನೇಮಕಾತಿ 2026: 80 ಸಹಾಯಕ ಭವಿಷ್ಯ ನಿಧಿ ಆಯುಕ್ತ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ, ಸಹಾಯಕ ಭವಿಷ್ಯ ನಿಧಿ ಆಯುಕ್ತ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಕೇಂದ್ರ ಲೋಕಸೇವಾ ಆಯೋಗವು (UPSC) ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಮಟ್ಟದ ಸರ್ಕಾರಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 11-ಸೆಪ್ಟೆಂಬರ್-2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: upsc.gov.in

## ಪಿಲ್ಲರ್ ಕುಸಿದು ಬಿದ್ದು ವಿದ್ಯಾರ್ಥಿ ಸಾವು

❑ **ನೈಜ್ಯ ದೆಸೆ ನ್ಯೂಸ್**

ತುಮಕೂರು: ಶಾಲಾ ಆವರಣದಲ್ಲಿ ಆಟವಾಡುತ್ತಿದ್ದ ವಿದ್ಯಾರ್ಥಿಯ ಮೇಲೆ ಏಕಾಏಕಿ ಪಿಲ್ಲರ್ ಕುಸಿದು ಬಿದ್ದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿರುವ ದಾರುಣ ಘಟನೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬಿಳಗಿಹಳ್ಳಿ ಗ್ರಾಮದಲ್ಲಿ ನಡೆದಿದೆ. ಮತ್ತಿಗಟ್ಟ ಗ್ರಾಮದ ಧನುಷ್ (10) ಮೃತ ವಿದ್ಯಾರ್ಥಿ.ಬಿಳಗಿಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 4 ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದು, ಇಂದು ಬೆಳಿಗ್ಗೆ ಎಂದಿನಂತೆ ವಿದ್ಯಾರ್ಥಿ ಶಾಲೆಗೆ ಬಂದಿದ್ದ.




ಶಾಲೆ ಆರಂಭಕ್ಕೂ ಮುನ್ನ ಸ್ನೇಹಿತರೊಂದಿಗೆ ಶಾಲೆಯ ಆವರಣದಲ್ಲಿ ಆಟವಾಡುತ್ತಿದ್ದ ವೇಳೆ ಶಾಲೆಯ ಪಕ್ಕದಲ್ಲಿರುವ ಕಟ್ಟಡವೊಂದರ ಪಿಲ್ಲರ್ ಏಕಾಏಕಿ ಕುಸಿದು ಧನುಷ್ ಮೇಲೆ ಬಿದ್ದಿದೆ. ನೇರವಾಗಿ ತಲೆಯ ಮೇಲೆ ಕಂಬ ಬಿದ್ದ ಪರಿಣಾಮ ತೀವ್ರ ರಕ್ತಸ್ರಾವದಿಂದ ಧನುಷ್ ಮೃತಪಟ್ಟಿದ್ದಾನೆ ಎಂದು ತಿಳಿದುಬಂದಿದೆ. ಸುದ್ದಿ ತಿಳಿಯುತ್ತಿದ್ದಂತೆ ಹಂದನಕೆರೆ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಹಿಮಾಚಲ ಪ್ರದೇಶದಲ್ಲಿ ಎರಡು ಬಾರಿ ಭೂಕಂಪ, ಜನರಲ್ಲಿ ಆತಂಕ

❑ **ನೈಜ್ಯ ದೆಸೆ ನ್ಯೂಸ್**

ಶಿಮ್ಲಾ: ಹಿಮಾಚಲ ಪ್ರದೇಶದ ಚಂಬಾ ಮತ್ತು ಕಾಂಗ್ರಾ ಜಿಲ್ಲೆಗಳಲ್ಲಿ ಇಂದು ಮಧ್ಯಮ ತೀವ್ರತೆಯ ಎರಡು ಭೂಕಂಪಗಳು ಸಂಭವಿಸಿದ್ದು, ಜನರಲ್ಲಿ ಆತಂಕ ಮೂಡಿಸಿದೆ.ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ (ಎನ್‌ಸಿಎಸ್) ಪ್ರಕಾರ, ಚಂಬಾ ಜಿಲ್ಲೆಯಲ್ಲಿ 3.6 ತೀವ್ರತೆಯ ಭೂಕಂಪ ಸಂಭವಿಸಿದೆ. ಇದರ ಕೇಂದ್ರಬಿಂದು ಕರೇರಿ ಸಮೀಪದಲ್ಲಿದ್ದು, ಭೂಮಿಯಿಂದ 5 ಕಿ.ಮೀ. ಆಳದಲ್ಲಿ ಭೂಕಂಪ ಸಂಭವಿಸಿದೆ.



ಇದಾದ ಸುಮಾರು 45 ನಿಮಿಷಗಳ ಬಳಿಕ ಕಾಂಗ್ರಾ ಜಿಲ್ಲೆಯಲ್ಲಿ ಮತ್ತೊಂದು ಮಧ್ಯಮ ತೀವ್ರತೆಯ ಭೂಕಂಪ ದಾಖಲಾಗಿದೆ. ಇದರ ಕೇಂದ್ರವೂ 5 ಕಿ.ಮೀ. ಆಳದಲ್ಲಿತ್ತು.ಭೂಕಂಪಗಳು ಕಡಿಮೆ ಆಳದಲ್ಲಿ ಸಂಭವಿಸಿದ್ದ-ರಿಂದ ಕಂಪನದ ಅನುಭವ ತೀವ್ರವಾಗಿತ್ತು. ಕೆಲ ಪ್ರದೇಶಗಳಲ್ಲಿ ಆತಂಕಗೊಂಡ ಜನರು ಮನೆಗಳಿಂದ ಹೊರಗೆ ಓಡಿ ಬಂದರು. ಸದ್ಯ ಯಾವುದೇ ಸಾವು-ನೋವು ಅಥವಾ ಕಟ್ಟಡಗಳು ಸೇ-ರಿದಂತೆ ಇತರ ಆಸ್ತಿಗಳಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜಿಲ್ಲಾಡಳಿತ ಹಾಗೂ ಸಂಬಂಧಪಟ್ಟ ಇಲಾಖೆಗಳು ಪರಿಸ್ಥಿತಿಯನ್ನು ನಿರಂತರವಾಗಿ ಗಮನಿಸುತ್ತಿವೆ. ಕಾಂಗ್ರಾ ಮತ್ತು ಚಂಬಾ ಜಿಲ್ಲೆಗಳು ಭೂಕಂಪನ ವಲಯ-5ರಲ್ಲಿ ಬರುತ್ತವೆ. ಇದು ಭೂಕಂಪದಿಂದ ಹೆಚ್ಚಿನ ಹಾನಿ ಸಂಭವಿಸುವ ಅಪಾಯವಿರುವ ಪ್ರದೇಶ ಎಂದು ವರ್ಗೀಕರಿಸಲಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ರಾಮತ್ನಾಳದಲ್ಲಿ "ಸ್ಪರ್ಶ ಕುಷ್ಟರೋಗ ಜಾಗೃತಿ" ಹಾಗೂ ಸ್ವಚ್ಛತಾ ಕಾರ್ಯಕ್ರಮ

❑ **ನೈಜ್ಯ ದೆಸೆ ನ್ಯೂಸ್**



ಸಿಂಧನೂರು/ರಾಮತ್ನಾಳ: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಹಾಗೂ ತಾಲೂಕು ಅರೋಗ್ಯಾಧಿಕಾರಿಗಳ ಕಾರ್ಯಾಲಯ ಸಿಂಧನೂರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ರಾಗಲಪರ್ವಿ, ಉನ್ನತಿಕರಿಸಿದ ಹಿರಿಯ ಪ್ರಾಥಮಿಕ ಶಾಲೆ ರಾಮತ್ನಾಳ ಇವರ ಸಂಂ-ಯುಕ್ತಾಶ್ರಯದಲ್ಲಿ " ಸ್ಪರ್ಶ ಕುಷ್ಠರೋಗಕ್ಕೆ ಚಿಕಿತ್ಸೆ ಇದೆ, ಬನ್ನಿ, ಒಗ್ಗಟ್ಟಾಗಿ ಹೊರಡೋಣ " ಈ ಸಂದರ್ಭದಲ್ಲಿ ಶ್ರೀಮತಿ ಗೀತಾ ಹಿರೇಮಠ್ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ತಾಲೂಕು ಆರೋಗ್ಯಾದಿಕಾರಿಗಳಕಾರ್ಯಾಲಯ ಸಿಂಧನೂರು ಇವರು ಮಾತನಾಡಿ ಕುಷ್ಟರೋಗದ ಬಗ್ಗೆ ವಿದ್ಯಾರ್ಥಿಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಜನ ಜಾಗೃತ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಬಿಳಿ ಅಥವಾ ಕಂದು ಬಣ್ಣದಮಚ್ಚೆಗಳು ಸ್ಪರ್ಶ ಮತ್ತು ನೋವಿನ ಕೊರತೆ ಒರಟಾದ ಚರ್ಮ, ಮಚ್ಚೆಗಳು, ಅರಿವು ಕಡಿಮೆಯಾಗುವುದು, ಚರ್ಮ ಒರಟಾಗುವುದು, ಮೂಢ ನಂಬಿಕೆ ಬೇಡ ಚಿಕಿತ್ಸೆ ಪಡೆಯಿರಿ ಒಆಖಿ ಚಿಕಿತ್ಸೆ ಉಚಿತ ಮತ್ತು ಪರಿಣಾಮಕಾರಿ, ತಾರತಮ್ಯ ಬೇಡ ಪ್ರೀತಿ ತೋರಿ, ಕುಷ್ಟರೋಗಿಗಳನ್ನು ಗೌರವಿಸಿ ಸಮನಾಗಿ ಕಾಣಿ, ಕುಷ್ಟರೊಗ ಮುಕ್ತ ಸಮಾಜ ನಮ್ಮ ಗುರಿ, ಒಬ್ಬ ರಾಷ್ಟ್ರೀಯ ಮತ್ತು ಜಿಲ್ಲಾಮಟ್ಟದಲ್ಲಿ ರೋಗದ ಹರಳುವಿಕೆ ಪ್ರಮಾಣವನ್ನು 10,000 ಜನಸಂಖ್ಯೆಗೆ ಒಂದಕ್ಕಿಂತ ಕಡಿಮೆ ಮಾಡುವುದು ರಾಷ್ಟ್ರೀಯ ಮಟ್ಟದಲ್ಲಿ ಹೊಸದಾಗಿ ಪತ್ತೆಯಾದ ಪ್ರಕರಣಗಳಲ್ಲಿ ಗ್ರೇಡ್ ಟು ಅಂಗವಿಕಲತೆಯ ಪ್ರಮಾಣವನ್ನು ಒಂದಕ್ಕಿಂತ ಕಡಿಮೆ ಮಾಡುವುದು ರಾಷ್ಟ್ರೀಯ ಮಟ್ಟದಲ್ಲಿ ಹೊಸದಾಗಿ ಪತ್ತೆಯಾದ ಪ್ರಕರಣಗಳಿಗೆ ರಾಷ್ಟ್ರೀಯ ಮಟ್ಟದಲ್ಲಿ ಹೊಸದಾಗಿ ಪತ್ತೆಯಾದ ಪ್ರಕರಣಗಳಲ್ಲಿ ಗ್ರೇಡ್ 2 ಅಂಗವಿಕಲತೆಯ ಪ್ರಮಾಣವನ್ನು ಶೇ 1 ಕ್ಕಿಂತ ಕಡಿಮೆ ಮಾಡುವುದು ರಾಷ್ಟ್ರೀಯ ಮಟ್ಟದಲ್ಲಿ ಗ್ರೇಟ್ ಅಂಗವಿಕಲತೆ ಪ್ರಕರಣಗಳನ್ನು ಪ್ರತಿ 10 ಲಕ್ಷ ಜನ ಸಂಖ್ಯೆಗೆ ಒಂದಕ್ಕಿಂತ ಕಡಿಮೆ ಮಾಡುವುದು ಹೊಸದಾಗಿ ಪತ್ತೆಯಾದ ಮಕ್ಕಳ ಪ್ರಕರಣಗಳಲ್ಲಿ ಶೂನ್ಯ ಅಂಗವಿಕಲತೆ ಕಡಿಮೆ ಮಾಡುವುದು ಕುಷ್ಟರೋಗದಿಂದ ಬಾದಿತರಾದ ವ್ಯಕ್ತಿಗಳ ತಾರತಮ್ಯ ಮತ್ತು ಕಳಂಕವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಹೇಗೆ ಪತ್ತೆ ಸಂಪೂರ್ಣ ಚಿಕಿತ್ಸೆ ಅಂಗವಿಕಲರಹಿತ ಜೀವನ ಭೇದಭಾವ ರಹಿತ ಸಮಾಜ ಮಾಡುವುದು ಜವಾಬ್ದಾ-ರಿಯಾಗಿದೆ ಎಂದು ತಿಳಿಸಲಾಯಿತು, ಶಾಲಾ ಅಡುಗೆ ಕೋಣೆಗಳು ಸ್ವಚ್ಛತೆಯ ಬಗ್ಗೆ ಮತ್ತು ಸುರಕ್ಷತೆಯ ಬಗ್ಗೆ ಅಡುಗೆ ಸಹಾಯಕರಿಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಗಂಗಮ್ಮ ಕಊಅಔ, ಜಯ ದುರ್ಗಾ ಅಊಔ, ಪ್ರಕಾಶ್ ಊಖಔ, ಶಾಲಾ ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಅಸ್ಪೃಶ್ಯತೆಯ ಕಳಂಕ ಇನ್ನೂ ಯಾಕೆ?

### ಮನಸ್ಸು ಬದಲಾದಾಗಲೇ ಸಮಾಜ ಬದಲಾಗುತ್ತೆ..

❑ **ನೈಜ್ಯ ದೆಸೆ ವಿಶೇಷ**

ಮೊನ್ನೆ ನಡೆದ ಘಟನೆಯೊಂದು ನನಗೆ ತುಂಬಾ ಬೇಜಾರು ಉಂಟುಮಾಡಿದೆ. ಹಿರಿಯ ರಾಜಕಾರಣಿಯಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಆಗಸ್ಟ್ 8ರಂದು ಉತ್ತರಾಖಂಡದ ಹಲ್ದ್ವಾನಿಯ ರಾಮಲೀಲಾ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ್ದರು. ಅದಾದ ಎರಡು ದಿನಗಳ ನಂತರ ಅದೇ ಸ್ಥಳದಲ್ಲಿ ಕೆಲವರು "“ಶುದ್ಧೀಕರಣ ಹವನ”" ನಡೆಸಿದರೆಂಬ ಸುದ್ದಿ ಹೊರಬಂದಿದೆ. ಗಂಗಾಜಲ ಸೇರಿದಂತೆ ಧಾರ್ಮಿಕ ವಿಧಿವಿಧಾನಗಳ ಮೂಲಕ ಸ್ಥಳ ಶುದ್ಧೀಕರಣ ಮಾಡಲಾಗಿದೆ ಎಂಬ ವರದಿಗಳು ಬಂದಿರುವುದು ನಿಜಕ್ಕೂ ಮನಸ್ಸಿಗೆ ನೋವುಂಟು ಮಾಡುವ ಸಂಗತಿ.

ಒಬ್ಬ ಮನುಷ್ಯ ಬಂದು ಮಾತಾಡಿದ ಜಾಗವನ್ನು, ಆತ ದಲಿತ ಸಮುದಾಯಕ್ಕೆ ಸೇರಿದವನು ಎಂಬ ಕಾರಣಕ್ಕೆ ಶುದ್ಧ ಮಾಡಬೇಕೆಂಬ ಮನೋಭಾವ ನಮ್ಮ ಸಮಾಜದಲ್ಲಿ ಇನ್ನೂ ಉಳಿದಿದೆಯೆಂದಾದರೆ, ನಾವು ಎಷ್ಟೇ ಅಭಿವೃದ್ಧಿಯ ಮಾತಾಡಿದರೂ ಮನಸ್ಸಿನೊಳಗಿನ ಕತ್ತಲೆ ಇನ್ನೂ ಹೋಗಿಲ್ಲ ಎನ್ನುವುದು ನೋವಿನ ಸಂಗತಿ. ಇದು ಯಾರನ್ನೋ ರಾಜಕೀಯವಾಗಿ ಬೆಂಬಲಿಸುವ ಅಥವಾ ವಿರೋಧಿಸುವ ಪ್ರಶ್ನೆಯಲ್ಲ. ಇದು ಮನುಷ್ಯನ ಗೌರವದ ಪ್ರಶ್ನೆ ಅಷ್ಟೇ ಮಲ್ಲಿಕಾರ್ಜುನ ಖರ್ಗೆ ಅವರು ಈ ಘಟನೆಯ ಬಗ್ಗೆ ನೊಂದು ಮಾತನಾಡಿರುವುದು ಸಹಜ. ದಶಕಗಳ ಕಾಲ ಸಾರ್ವಜನಿಕ ಜೀವನದಲ್ಲಿದ್ದು, ಸಂವಿಧಾನದ ಮೌಲ್ಯಗಳಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಧ್ವನಿ ಎತ್ತುತ್ತಾ



ಶಿವನಗೌಡ ನಾಯಕ
ಮಾಜಿ ಸಚಿವರು,ಕರ್ನಾಟಕ ಸರ್ಕಾರ

ಬಂದಿರುವ ಹಿರಿಯ ನಾಯಕರು ಅವರು. ಇಂಥ ವ್ಯಕ್ತಿಯೊಬ್ಬರು ಮಾತನಾಡಿದ ಸ್ಥಳವನ್ನೇ ಜಾತಿಯ ಕಾರಣಕ್ಕೆ ಶುದ್ಧೀಕರಿಸುವ ಪ್ರಯತ್ನ ನಡೆದಿದೆ ಎನ್ನುವ ಸುದ್ದಿ ಅವರ ಮನಸ್ಸಿಗೆ ಎಷ್ಟು ನೋವು ತಂದಿರಬಹುದು ಅನ್ನೋದನ್ನು ಊಹಿಸಬಹುದು.

ಬಸವಣ್ಣನವರು ಶತಮಾನಗಳ ಹಿಂದೆಯೇ ಕೇಳಿದ ಪ್ರಶ್ನೆ ಇಂದಿಗೂ ನಮ್ಮನ್ನು ಕಾಡುತ್ತದೆ “ದಯವಿಲ್ಲದ ಧರ್ಮವದೆಯಾವುದಯ್ಯಾ?” ದಯೆ, ಕರುಣೆ ಮತ್ತು ಮಾನವೀಯತೆ ಇಲ್ಲದಿದ್ದರೆ ಆ ಧರ್ಮಕ್ಕೆ ಅರ್ಥವೇನು ಎಂಬುದು ಇದರ ಒಳಾರ್ಥ. ಧರ್ಮ ಮನುಷ್ಯರನ್ನು ಒಂದುಗೂಡಿಸಬೇಕೇ ಹೊರತು, ಮನುಷ್ಯನನ್ನು ಮನುಷ್ಯನಿಂದ ದೂರ ಮಾಡಬಾರದು. ನಮ್ಮ ಉತ್ತರ ಕರ್ನಾಟಕದ ಕಡೆ ಒಂದು ಮಾತಿದೆ “ಮನುಷ್ಯನಿಗೆ ಮನುಷ್ಯನೇ ಮಿಗಿಲು.”ಜಾತಿ, ಮತ, ಪಂಥ ಇವೆಲ್ಲಕ್ಕಿಂತ ಮನುಷ್ಯತ್ವ ದೊಡ್ಡದು ಅನ್ನೋ ಈ ಸರಳ ಸತ್ಯವನ್ನು ನಾವು ಮರೆಯಬಾರದು.

ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರು ಕೂಡ ಈ ಘಟನೆಯನ್ನು ಖಂಡಿಸಿ ತನಿಖೆ ನಡೆಸುವುದಾಗಿ ಹೇಳಿದ್ದಾರೆ ಎಂಬುದು ಸ್ವಾಗತಾರ್ಹ. ತಪ್ಪು ಯಾರಿಂದ ಆಗಿದ್ರೂ ತನಿಖೆ ಆಗಬೇಕು. ತಪ್ಪಿತಸ್ಥರು ಯಾರೇ ಇರಲಿ, ಕಾನೂನು ತನ್ನ ಕೆಲಸ ಮಾಡಬೇಕು. ಅಸ್ಪೃಶ್ಯತೆಯಂತಹ ಅಮಾನವೀಯ ಆಚ-ರಣೆಗಳಿಗೆ ಕಾನೂನಿನಲ್ಲೂ ಅವಕಾಶ ಇರಬಾರದು, ಸಮಾಜದಲ್ಲೂ ಜಾಗ ಇರಬಾರದು.
ಆದರೆ ಒಂದು ವಿಚಾರ ಮಾತ್ರ ನಮ್ಮೆಲ್ಲರ ಮನಸ್ಸನ್ನು ಕಾಡಬೇಕು.ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ, ಸಂವಿಧಾನ ಅಸ್ಪೃಶ್ಯತೆಯನ್ನು ನಿಷೇಧಿಸಿ ಇಷ್ಟು ವರ್ಷ ಕಳೆದರೂ, ಇಂಥ ಘಟನೆಗಳು ಯಾಕೆ ನಡೆಯುತ್ತಿವೆ

ಇದು ಖರ್ಗೆ ಅವರೊಬ್ಬರ ನೋವಲ್ಲ. ಇದು ಒಬ್ಬ ದಲಿತನ ನೋವಲ್ಲ. ಇದು ಮನುಷ್ಯತ್ವದ ನೋವು. ರಾಜಕೀಯ ಪಕ್ಷಗಳು ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿಕೊಳ್ಳೋದು ಸಹಜ. ಆದರೆ ಇಂಥ ಸೂಕ್ಷ್ಮ ಸಾಮಾಜಿಕ ವಿಷಯವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳದೆ, ಅಸ್ಪೃಶ್ಯತೆಯ ಬೇರುಗಳನ್ನು ಕಿತ್ತು ಹಾಕುವ ಕೆಲಸಕ್ಕೆ ಎಲ್ಲರೂ ಕೈಜೋಡಿಸಬೇಕು.

ನಾವು ದೇವಸ್ಥಾನಗಳನ್ನು ಶುದ್ಧ ಮಾಡಬಹುದು, ಸ್ಥಳಗಳನ್ನು ಶುದ್ಧ ಮಾಡಬಹುದು. ಆದರೆ ಮನಸ್ಸಿನೊಳಗೆ ಜಾತಿಯ ಕೊಳಕು ಉಳಿದಿದ್ರೆ ಆ ಶುದ್ಧೀಕರಣಕ್ಕೆ ಏನು ಅರ್ಥ? ಮನುಷ್ಯನ ಹೆಜ್ಜೆ ಬಿದ್ದ ಜಾಗ ಅಪವಿತ್ರವಾಗುವುದಿಲ್ಲ. ಮನುಷ್ಯನ ಮನಸ್ಸು ಕೆಟ್ಟಾಗ ಮಾತ್ರ ಸಮಾಜ ಅಪವಿತ್ರವಾಗುತ್ತೆ. ಇಂಥ ಘಟನೆಗಳು ಮತ್ತೆ ಮತ್ತೆ ನಡೆಯದಂತೆ ಸಮಾಜದ ಪ್ರತಿಯೊಬ್ಬರೂ ಎಚ್ಚೆತ್ತುಕೊಳ್ಳಬೇಕು. ಮಕ್ಕಳಿಗೆ ಚಿಕ್ಕಂದಿನಿಂದಲೇ ಜಾತಿ-ಮತದ ಮೇಲುಕೀಳು ಕಲಿಸದೆ, ಸಮಾನತೆ, ಸಹೋದರತ್ವ ಮತ್ತು ಮಾನವೀಯತೆ ಕಲಿಸಬೇಕು.

ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ವೈಯಕ್ತಿಕ ನೋವನ್ನಷ್ಟೇ ಹೇಳಿಕೊಳ್ಳದೆ, ಇಂತಹ ಮನೋಭಾವ ಸಮಾಜದಲ್ಲಿ ಯಾರಿಗೂ ಎದುರಾಗಬಾರದು ಎನ್ನುವ ದೊಡ್ಡ ಪ್ರಶ್ನೆಯನ್ನು ದೇಶದ ಮುಂದೆ ಇಟ್ಟಿದ್ದಾರೆ. ಅವರ ನೋವು ಒಬ್ಬ ವ್ಯಕ್ತಿಯ ನೋವಲ್ಲ; ಶತಮಾನಗಳಿಂದ ತಾರತಮ್ಯ ಅನುಭವಿಸಿದ ಜನರ ನೋವಿನ ಪ್ರತಿ-ಧ್ವನಿಯಂತಿದೆ. ಅವರಂಥ ಹಿರಿಯರು ಈ ನೋವನ್ನು ಸಮಾಜದ ಮುಂದೆ ಇಟ್ಟಿರುವುದು, ಅಸ್ಪೃಶ್ಯತೆಯ ವಿರುದ್ಧ ಮತ್ತೊಮ್ಮೆ ಗಟ್ಟಿಯಾಗಿ ಚಿಂತನೆ ಮಾಡುವ ಅವಶ್ಯಕತೆ ಇದೆ.
ಈ ಘಟನೆ ನಡೆದಿದೆಯೆಂಬ ಸುದ್ದಿ ಕೇಳಿ ಮನಸ್ಸಿಗೆ ನೋವಾಗುತ್ತೆ. ಆದರೆ ಆ ನೋವು ಕೇವಲ ಬೇಸರವಾಗಿ ಉಳಿಯಬಾರದು. ಇದು ನಮ್ಮೆಲ್ಲರ ಆತ್ಮಾವಲೋಕನಕ್ಕೆ ಕಾರಣವಾಗಬೇಕು. ಅಸ್ಪೃಶ್ಯತೆ ಪುಸ್ತಕದ ಪುಟಗಳಲ್ಲಿ ಮಾತ್ರ ಸತ್ತುಹೋಗಬಾರದು; ಜನರ ಮನಸ್ಸಿನಿಂದಲೇ ಸತ್ತುಹೋಗಬೇಕು. ಮುಂದೆ ಯಾರೇ ಆಗಿರಲಿ, ಯಾವ ಜಾತಿಯವರೇ ಆಗಿರಲಿ, ಯಾವ ಪಕ್ಷದವರೇ ಆಗಿರಲಿ ? ಅವರ ಮನುಷ್ಯತ್ವಕ್ಕೆ ಗೌರವ ಸಿಗಬೇಕು. ಇಂಥ ಘಟನೆ ಮತ್ತೊಮ್ಮೆ ನಡೆಯದ ಸಮಾಜವನ್ನು ಕಟ್ಟೋದು ನಮ್ಮೆಲ್ಲರ ಹೊಣೆ.

ಜಾತಿಯ ಗೋಡೆಗಳು ಬೀಳಲಿ ಮನುಷ್ಯತ್ವದ ಸೇತುವೆಗಳು ಬೆಳೆಯಲಿ ಅಸ್ಪೃಶ್ಯತೆಯ ಕಳಂಕ ಸಂಪೂರ್ಣ ತೊಲಗಲಿ.

## ಬಿಎಂಟಿಸಿ ಬಿಡಿ ಭಾಗಗಳ ಖರೀದಿ ಅಕ್ರಮ ಕುರಿತು ಉನ್ನತ ಮಟ್ಟದ ತನಿಖೆ : 8 ಮಂದಿ ಸಸ್ಪೆಂಡ್– ಬೈರತಿ ಸುರೇಶ್

❑ **ನೈಜ್ಯ ದೆಸೆ ನ್ಯೂಸ್**

**ವಿಧಾನಪರಿಷತ್ತು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಬಸ್ ಬಿಡಿ ಭಾಗಗಳ ಖರೀದಿಯಲ್ಲಿ ನಡೆದಿರುವ ನ್ಯೂನತೆಗಳ ಬಗ್ಗೆ ಐವರು ಸದಸ್ಯರ ಉನ್ನತ ಮಟ್ಟದ ಸಮಿತಿ ತನಿಖೆ ನಡೆಸುತ್ತಿದ್ದು, ಮುಂದಿನ ಅಕ್ಟೋಬರ್ ಅಂತ್ಯದ ವೇಳೆಗೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.**

ವಿಧಾನಪರಿಷತ್ತಿನಲ್ಲಿ ಬುಧವಾರ ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ನ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತ-ರಿಸಿದ ಸಚಿವರು, ಬಿಎಂಟಿಸಿ ಬಸ್ ಬಿಡಿ ಭಾಗಗಳ ಖರೀದಿಯಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿರುವ ಬಗ್ಗೆ ಮಾಹಿತಿಗಳು ಕಂಡು ಬಂದ ಹಿನ್ನೆಲೆಯಲ್ಲಿ ತನಿಖೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.



ಭದ್ರತಾ ಜಾಗೃತಾಧಿಕಾರಿ ಪರಿಮಳಾ ಎಲ್. ನಾಯಕ್, ಸಿ.ಕೆ.ರಮ್ಯ, ಮಬೀನ್ ತಾಜ್, ಆನಂದ ಪ್ರಸಾದ್ ಮತ್ತು ಎನ್.ಆನಂದ್ ಅವರನ್ನೊಳಗೊಂಡ ಸಮಿತಿಯು ತನಿಖೆ ನಡೆಸುತ್ತಿದೆ. ಈ ಸಮಿತಿಯು ಪ್ರಾಥಮಿಕ ಹಂತದ ವರದಿಯನ್ನು ಸಲ್ಲಿಸಿದೆ ಎಂದು ಹೇಳಿದರು.

ಈ ವರದಿಯನ್ವಯ ಮೇಲ್ನೋಟಕ್ಕೆ ಕರ್ತವ್ಯಲೋಪ ಎಸಗಿರುವ ಸಹಾಯಕ ಉಗ್ರಾಣಾಧಿಕಾರಿ ಆರ್.ಎಂ.ಬಂಟನೂರಕರ್, ಉಗ್ರಾಣ ಛಾಯಾ, ಶಿಲ್ಪ, ಆರ್.ನಾಗರಾಜು, ಅಶೋಕ್, ಎಸ್.ರೂಪಾ, ಪ್ರೇಮ ನರಿಯಣ್ಣನವರ್ ಮತ್ತು ಎಸ್.ಕೆ.ರವೀಶ್ ಅವರನ್ನು ಅಮಾನತು ಮಾಡಲಾಗಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

ಈ ಸಮಿತಿಯು ಕೂಲಂಕುಷ ತನಿಖೆಯನ್ನು ಮುಂದುವರಿಸಿದ್ದು, ಮುಂದಿನ ಅಕ್ಟೋಬರ್ ಅಂತ್ಯದ ವೇಳೆಗೆ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಿದೆ. ಈ ವರದಿಯನ್ನು ಪರಿಶೀಲಿಸಿದ ನಂತರ ತಪ್ಪಿತಸ್ಥರ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು

## ಎಲೆಕೂಡ್ಲಿಗಿ ಕ್ಯಾಂಪ್‌ನಲ್ಲಿ 10 ಲಕ್ಷ ವೆಚ್ಚದ ನೂಲಿ ಚಂದಯ್ಯ ಸಮುದಾಯ ಭವನಕ್ಕೆ ಭೂಮಿಪೂಜೆ – ಬಾಬು ಗೌಡ ಬಾದರ್ಲಿ

❑ **ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ತಾಲ್ಲೂಕಿನ ಎಲೆಕೂಡ್ಲಿಗಿ ಕ್ಯಾಂಪ್‌ನಲ್ಲಿ 10 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ನೂಲಿ ಚಂದಯ್ಯ ಸಮುದಾಯ ಭವನದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಲಾಯಿತು.**

ಈ ಸಂದರ್ಭದಲ್ಲಿ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದ (ಖಗಆಂ) ಅಧ್ಯಕ್ಷರಾದ ಶ್ರೀ ಬಾಬುಗೌಡ ಬಾದರ್ಲಿ ಅವರು ಭೂಮಿಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ಗ್ರಾಮೀಣ ಹಾಗೂ ಕ್ಯಾಂಪ್ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಮೂಲಸೌಕರ್ಯ ಕಾಮಗಾ-ರಿಗಳು ಅತ್ಯಂತ ಅಗತ್ಯವಾಗಿದ್ದು, ಸಾರ್ವಜನಿಕರ ಬೇಡಿಕೆಗಳಿಗೆ ಸ್ಪಂದಿಸಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಸಮುದಾಯ ಭವನ ನಿರ್ಮಾಣದಿಂದ ಸ್ಥಳೀಯರಿಗೆ ಸಭೆ-ಸಮಾರಂಭಗಳು, ಸಾಮಾಜಿ-ಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಅನುಕೂಲವಾಗಲಿದೆ. ಸಾರ್ವಜನಿಕ-ರಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಇಂತಹ ಅಭಿವೃದ್ಧಿ ಕಾಮಗಾ-ರಿಗಳಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು. ಅಭಿವೃದ್ಧಿಯೇಆದ್ಯತೆ ಸಿಂಧನೂರು ತಾಲ್ಲೂಕಿನ ವಿವಿಧ ಗ್ರಾಮಗಳು ಹಾಗೂ ಕ್ಯಾಂಪ್ ಪ್ರದೇಶಗಳಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು, ಸಮುದಾಯ ಭವನ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರ ಜೀವನಮಟ್ಟ ಸುಧಾರಿಸಲು ನಿರಂತರ ಪ್ರಯತ್ನಗಳು ನಡೆಯುತ್ತಿವೆ.



ರಾಜಕೀಯವು ಕೇವಲ ಚುನಾವಣೆ ಮತ್ತು ಅಧಿಕಾರಕ್ಕೆ ಸೀಮಿತವಾಗದೆ, ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಅವರ ಅಗತ್ಯಗಳಿಗೆ ಅನುಗುಣವಾಗಿ ಅಭಿವೃದ್ಧಿ ಕಾರ್ಯಗಳನ್ನು ತಲುಪಿಸುವ ಸಾಧನವಾಗಬೇಕು ಎಂಬ ಆಶಯದೊಂದಿಗೆ ಜನಪ್ರತಿನಿಧಿಗಳು ಹಾಗೂ ಸ್ಥಳೀಯ ಮುಖಂಡರು ಕಾರ್ಯನಿರ್ವಹಿಸುತ್ತಿದ್ದಾರೆ. ಕ್ಷೇತ್ರದ ಪ್ರತಿಯೊಂದು ಭಾಗಕ್ಕೂ ಸಮಾನ ಆದ್ಯತೆ ನೀಡಿ ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸುವ ನಿಟ್ಟಿನಲ್ಲಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಾಗುತ್ತಿದೆ.

ಸಾರ್ವಜನಿಕರ ಬಹುದಿನಗಳ ಬೇಡಿಕೆಗಳಿಗೆ ಸ್ಪಂದಿಸಿ ಕೈಗೊಳ್ಳಲಾಗುತ್ತಿರುವ ಕಾಮಗಾ-ರಿಗಳು ಸ್ಥಳೀಯರಲ್ಲಿ ಸಂತಸ ಮೂಡಿಸಿದ್ದು, ಮುಂದಿನ ದಿನಗಳಲ್ಲಿಯೂ ಹೆಚ್ಚಿನ ಅಭಿವೃದ್ಧಿ ಯೋಜನೆಗಳು ಜಾರಿಯಾಗುವ ನಿರೀಕ್ಷೆ ವ್ಯಕ್ತವಾಗಿದೆ.

“ಜನರ ವಿಶ್ವಾಸಕ್ಕೆ ಬೆಲೆ ನೀಡಿ, ಅಭಿವೃದ್ಧಿಯ ಮೂಲಕ ಉತ್ತರ ನೀಡುವುದು ನಮ್ಮ ಮುಖ್ಯ ಉದ್ದೇಶ. ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಎಲ್ಲರ ಸಹಕಾರದೊಂದಿಗೆ ನಿರಂತರವಾಗಿ ಶ್ರಮಿಸಲಾಗುವುದು” ಎಂಬ ಸಂದೇಶವನ್ನು ಈ ಸಂದರ್ಭದಲ್ಲಿ ನೀಡಲಾಯಿತು. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು, ಸಾರ್ವಜನಿಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ವಚನ ದರ್ಶನ –3–

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ, ತಂದೆ ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ, ತಂದೆ ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ, ತಂದೆ ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲ ಸಂಗಮದೇವಾ

ಅನುಭಾವ ಶರಣರ ಒಂದು ವಿಶಿಷ್ಟವಾದ ಪರಿಕಲ್ಪನೆ. ಲೋಕದ ಜಂಜಡದಿಂದ ಮುಕ್ತವಾಗಿ ಅನಿರ್ವಚನೀಯವಾದ ಒಂದು ಮನ ಸ್ಥಿತಿ. ಶರಣರು ಆ ಒಂದು ಮನಸ್ಥಿತಿಯನ್ನು ಹೊಂದಿದ್ದರಿಂದಲೇ ಲೋಕದ ಸೆಳೆತಗಳನ್ನು ಮೀರಿ ಬೆಳೆದರು. ಜಗತ್ತನ್ನು ಇಂದ್ರಿಯಗಳ ದೃಷ್ಟಿಯಲ್ಲಿ ನೋಡಿದರೆ ಮನಸಿನಲ್ಲಿ ಆಸೆಗಳು ಗರಿಗೆದರಿ ನಿಲ್ಲುತ್ತವೆ. ಆದರೆ ಇಂದ್ರಿಯಾತೀತವಾದ ಅನುಭಾವದ ದೃಷ್ಟಿಯಲ್ಲಿ ನೋಡಿದರೆ ಎಲ್ಲ ವಸ್ತುಗಳೂ ಪ್ರಸಾದ ರೂಪದಲ್ಲಿ ಗೋಚರಿಸುತ್ತವೆ. ಆಗ ಆಸೆಯ ಬದಲು ಪ್ರಪಂಚದ ಬಗ್ಗೆ ಪೂಜ್ಯ ಭಾವ ಮೂಡುತ್ತದೆ. ಎಲ್ಲಡೆಯೂ ಶಿವ ಅಂಶವೇ ಗೋಚರಿಸುತ್ತದೆ. 'ಎತ್ತೆತ್ತ ನೋಡಿದಡತ್ತ ನೀನೇ ದೇವಾ. ಸಕಲ ವಿಸ್ತಾರವೂ ನೀನೇ ದೇವ' ಎಂಬ ಬಸವಣ್ಣನವರ ವಚನ ಅವರು ಜಗತ್ತನ್ನು ನೋಡುವ ದೃಷ್ಟಿಕೋನವನ್ನು ತಿಳಿಸುತ್ತದೆ. ಒಬ್ಬ ರಾಜ ಜಗತ್ತನು ನೋಡಿದಾಗ ಅದರ ಮೇಲೆ ಒಡೆತನ ಸಾಧಿಸಿ ಆಳಬೇಕೆಂಬ ಆಸೆ ಮೂಡುತ್ತದೆ. ಆದರೆ ಬಸವಣ್ಣನವರಂತಹ ಒಬ್ಬ ಅನುಭಾವಿ ಪ್ರಪಂಚವನ್ನು ನೋಡಿದಾಗ ಶಿವನ ವಾಸಸ್ಥಾನವಾದ ಈ ಜಗತ್ತಿನ ಸೇವೆ ಮಾಡಿ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಭಾವಿಸುತ್ತಾರೆ. ಆಸೆಯಿಂದ ನೋಡಿದವರು ಒಡೆಯರಾಗಬಯಸಿದರೆ, ಅನುಭಾವದಿಂದ ನೋಡಿದವರು ಸೇವಕರಾಗಬಯಸುತ್ತಾರೆ. ಇದುವೆ ಇಬ್ಬರಲ್ಲಿರುವ ವ್ಯತ್ಯಾಸ. ಅನುಭಾವ ಪಂಚ ಇಂದ್ರಿಯಗಳಿಗೂ ಮೀರಿದ ಒಂದು ಮಾನಸಿಕ ಅವಸ್ಥೆ. ಇಂದ್ರಿಯ ವಶದಲ್ಲಿರುವವರು ಕ್ಷಣಿಕ ಸುಖದಾಸೆಯ ಬೆನ್ನು ಹತ್ತಿ ಕೊನೆಗೆ ದುಃಖವನ್ನು ಅನುಭವಿಸುತ್ತಾರೆ. ಅಂತಹವರ ಮನಸು ಸದಾಚಂಚಲತೆಯಿಂದ ಕೂಡಿರುತ್ತದೆ. ಇಂಥ–ವರ ಪಾಲಿಗೆ ಸುಖ ಶಾಂತಿ ಎಂಬುದು ಗಗನ ಕುಸುಮ, ಕನ್ನಡಿಯ ಗಂಟಾಗಿರುತ್ತದೆ. ಎಲ್ಲಿಯವರೆವಿಗೂ ಇಂದ್ರಿಯಾಸಕ್ತಿಯನ್ನು ಮೀರಿ ನಿಲ್ಲುವದಿಲ್ಲವೋ ಅಲ್ಲಿಯವರೆವಿಗೂ ಅತೃಪ್ತ ಮನಸ್ಕರಾಗಿಯೇ ಇರುತ್ತಾರೆ. ಇಂತಹವರು ಮಾಡುವ ಪೂಜೆ ಧ್ಯಾನ ಜಪ ತಪಗಳು ವ್ಯರ್ಥಾಗಿರುತ್ತವೆ. ಶರೀರದಂತೆಯೇ ಮನಸಿಗೂ ಕಣ್ಣು, ಕಿವಿ, ಮೂಗು, ನಾಲಿಗೆ ಕಾಲುಗಳಿರುತ್ತವೆ. ಅವುಗಳನ್ನು ಅಂಕಿತದಲ್ಲಿಡುವವರೆವಿಗೂ ಆಧ್ಯಾತ್ಮ ಯಾವ ಸಾಧನೆಯನ್ನೂ ಮಾಡಲಾಗುವದಿಲ್ಲ. ಅಂತೆಯೇ ಬಸವಣ್ಣನವರು– ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ ನಿಮ್ಮ ಶರಣ–ರ ಪಾದವಲ್ಲದೇ ; ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲ ಸಂಗಮ ದೇವಾ ಎಂದಿದ್ದಾರೆ. ಮೇಲು ನೋಟಕ್ಕೆ ಈ ವಚನ ವಿಚಿತ್ರವೆನಿಸಿದರೂ ಇದರ ಹಿಂದೆ ಒಂದು ಮಹತ್ತರವಾದ ಅರ್ಥವಿದೆ. ಶರೀರದ ಎಲ್ಲ ಅಂಗಾಂಗಳಿಗೆ ಅದರದೇಯಾದ ಚಂಚಲತೆಯಿರುತ್ತದೆ. ಇವೆಲ್ಲವೂ ಮನಸಿನ ಏಕಾಗ್ರತೆಗೆ ಭಂಗ ತರುವಂತಹವು. ಅಂತೆಯೇ ಬಸವಣ್ಣನವರು ಮನಸಿನ ವಿಕಾರಕ್ಕೆ ಕಾರಣವಾದ ಚಂಚಲತೆಯನ್ನು ಮೀರಿ ನಿಲ್ಲಿಸುವಂತೆ ದೇವರಲ್ಲಿ ಮೊರೆಯಿಡುತ್ತಾರೆ. ವಿಕೃತ ಮನಸಿನ ಸ್ತಿತಿಯನ್ನು ಮೀರಿ ಅಂತರಂಗದಲ್ಲಿ ಪರಮಾತ್ಮನ ಸಾಕ್ಷಾತ್ಕಾರ ಹೊಂದುವುದೇ ಅನುಭಾವ. ಇದೊಂದು ಬಾಹ್ಯ ಸೆಳೆತಗಳನ್ನು ಮೀರಿ ನಿಲ್ಲುವ ಮನಸಿನ ಅವಸ್ಥೆ. ಅದನ್ನೇ ಶರಣರು ಅನು ಬಾವ ಎಂಬುದಾಗಿ ಕರೆದಿದ್ದಾರೆ. ಕಾಮ ಸಂಗವಳಿದು ಅನುಭಾವಸಂಗದಲುಳಿದವರ ಅಗಲಲಾರೆನು; ಶಿವಂಗೆ ಮಿಗೆ ಒಲಿದವರನು ನಾನಗಲಲಾರೆನು,ಕಾಣಾ, ಕೂಡಲ ಸಂಗಮ ದೇವಾ ಎಂಬ ಬಸವಣ್ಣ ನವರ ವಚನ ಅನುಭಾವಿಗಳ ಉತ್ತುಂಗ ಮನಸ್ತಿತಿಯನ್ನು ತಿಳಿಸುತ್ತದೆ. ಶರಣರ ಇಡೀ ಆಧ್ಯಾತ್ಮ ಸಾಧನೆಯ ಅಂತಿಮ ಗುರಿಯೇ ಈ ಮನಸ್ತಿತಿಯನ್ನು ಹೊಂದುವದಾಗಿರುತ್ತದೆ. ಲೋಕದ ಸಾಂಸಾರಿಕ ಜಂಜಡಮೀರಿ ಮಹತ್ತರ ಸಾಧನೆಗೆ ಅನುಭಾವವೇ ಮುಖ್ಯ ಭೂಮಿಕೆಯಾಗಿ–ರಿತ್ತದೆ. ಅನುಭಾವಿಯಾದವರು ಪ್ರಪಂಚದಲ್ಲಿದ್ದರೂ ಅದರ ವಿಕಾಕರಕ್ಕೆ ಒಳಗಾಗದೇ ನಿಶ್ಪ್ರಪಂಚರಾಗಿರುತ್ತಾರೆ. ಕೆಸೆರಿನಲ್ಲರಳಿದ ಕಮಲ ಕೆಸರಿನಿಂದ ಮಲಿನವಾಗದೇ ನಿರ್ಮಲವಾಗಿರುವಂತೆಯೇ, ಅನುಭಾವಿಗಳಾದವರು ಸಂಸಾರದೊಳಗಿದ್ದರೂ ಸಾಂಸಾ–ರಿಕ ಬಂಧನಕ್ಕೊಳಗಾಗದಂತೆ ಜೀವನ್ಮುಕ್ತರಾಗಿರುತ್ತಾರೆ. ಅಂತಹ ಅವಸ್ಥೆ ಪಡೆಯ ಬೇಕಾದರೆ ಅನುಭಾವಿಯಾಗಿರ ಬೇಕು. ಬಸವಣ್ಣ ಅನುಭಾವದ ಉತ್ತುಂಗ ಶಿಖರವೇರಿದ ಮಹಾನುಭಾವಿ. ಅಂತೆಯೇ ಸಕಲ ಸಾಧನೆಯ ಶಿಖರಾರೋಹಿಗಳಾಗಿ ಲೋಕಕ್ಕೆ ಬೆಳಕಾದರು. ಅದರಂತೆ ನಾವು ನೀವುಗಳು ವಚನಗಳನ್ನು ಪಚನ ಮಾಡಿಕೊಳೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

# ಹೆತ್ತವರ ಸೇವೆಯಲ್ಲಿ ಸಾರ್ಥಕ ಬದುಕನ್ನು ಕಂಡುಕೊಳ್ಳಬಹುದು – ನವೀನ್ ಮೇಕಾ

**ನೈಜ್ಯ ದೆಸೆ ನ್ಯೂಸ್**

ಸಿಂಧನೂರು: ಕಾರಟಗಿ ತಾಲೂಕಿನ ಗುಂಡೂರು ಕ್ಯಾಂಪಿನ ಕಾವ್ಯಶ್ರೀ ನವೀನ್ ಮೇಕಾ ಈ ಆದರ್ಶ ದಂಪತಿಗಳ ಪ್ರೀತಿಯ ಮಗಳಾದ ಗಾನ್ವಿಕಾ ಮೇಕಾ ಇವರ ದ್ವಿತೀಯ ವರ್ಷದ ಜನ್ಮ ಸಾರ್ಥಕ ದಿನ ಹಾಗೂ ಮಾನವೀಯತೆಯ ದಿನಾಚರಣೆಯನ್ನು ಸಿಂಧನೂರು ನಗರದ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ವಿವಿಧ ಬಗೆಯ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತ–ರಿಸುವ ಮೂಲಕ ಅರ್ಥಪೂರ್ಣವಾದ ಕಾರ್ಯಕ್ರಮ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಕೆ. ಹಂಚಿನಾಳ ಕ್ಯಾಂಪಿನ ಚಿಲ್ಕೂರಿ ಕುಟುಂಬದ ಮಾಧವಿ ಶ್ರೀನಿವಾಸ ಹಾಗೂ ಮೇಕಾ ಕುಟುಂಬದ ಕಾವ್ಯಶ್ರೀ ನವೀನ್ ಈ ದಂಪತಿಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಾವ್ಯಶ್ರೀ ಮೇಕಾ ಮಾತನಾಡಿ ಕಾರುಣ್ಯ ಆಶ್ರಮದಲ್ಲಿನ ಆಶ್ರಯದಾತರುಗಳು ನಮ್ಮ ಕುಟುಂಬದ ಹಿರಿಯರಂತೆ ಹಾಗೂ ಇಲ್ಲಿನ ವಯಸ್ಕರ ಬುದ್ಧಿಮಾಂದ್ಯರು ಮಕ್ಕಳು ಸಹೋದರ ಸಹೋದರಿಯರು ಎನ್ನುವ ಮನೋಭಾವನೆ ನಮ್ಮ ಕುಟುಂಬದ್ದು ಕಾರುಣ್ಯ ಆಶ್ರಮದ ಈ ಸೇವೆಯನ್ನು ನಾವು ನೋಡಿದಾಗ



ವಿಚಿತ್ರ ಜಗತ್ತಿನ ಅನುಭವವಾಯಿತು. ಮತ್ತು ವಿಶೇಷವಾಗಿ ಆಶ್ರಮದ ಅಭಿಯಾನವಾದ ಹೆತ್ತವರನ್ನು ಮಕ್ಕಳಾದವರು ವೃದ್ಧಾಶ್ರಮಕ್ಕೆ ತಳ್ಳಬಾರದು ಎನ್ನುವ ಕಾರುಣ್ಯಾಶ್ರಮದ ಸಂಕಲ್ಪ ಅರ್ಥಪೂರ್ಣವಾಗಿದೆ. ಇಂತಹ ಸೇವ ಕಾರ್ಯಕ್ಕೆ ನಾವು ನಮ್ಮ ಕುಟುಂಬ ಸದಾವಕಾಲ ಜೊತೆಗಿರುತ್ತೇವೆ ಎಂದು ಭಾವನಾತ್ಮಕವಾಗಿ ಮಾತನಾಡಿದರು ನಂತರ ನವೀನ್ ಮೇಕಾ ಮಾತನಾಡಿ ಹೆತ್ತವರ ಸೇವೆಯಲ್ಲಿ ಸಾಥ–ರ್ಕ ಬದುಕನ್ನು ನಾವೆಲ್ಲರೂ ಕಂಡುಕೊಳ್ಳಬಹುದು. ನಿಸ್ವಾರ್ಥತೆಯಾಗಿ ಕಾರುಣ್ಯ ಆಶ್ರಮದ ಸೇವೆ ಭಗವಂತನ ಪೂಜೆಗಿಂತ ಮಿಗಿಲಾಗಿದೆ. ಇಂತಹ ಪುಣ್ಯಕ್ಷೇತ್ರದಲ್ಲಿ ಆಶ್ರಯ ಪಡೆದಿರುವರೆಲ್ಲರೂ ದೇವರ ಸ್ವರೂಪಿಗಳು ಈ ದೇವರುಗಳನ್ನು ನಮ್ಮ ಮೇಕಾ ಕುಟುಂಬ ಯಾವಾಗಲೂ ಪ್ರೀತಿಸಿ ಪೂಜಿಸುತ್ತದೆ. ಕಾರುಣ್ಯ ಆಶ್ರಮದ ಜೊತೆ ನಮ್ಮ ಮೇಘ ಕುಟುಂಬ ಸದಾವಕಾಲ ಜೊತೆಗಿರುತ್ತದೆ. ಪ್ರಾಮಾಣಿಕವಾದಂತಹ ಈ ಕಾರುಣ್ಯ ಕುಟುಂಬಕ್ಕೆ ಪ್ರತಿಯೊಬ್ಬರೂ ಕೂಡ ಸಹಾಯ ಸಹಕಾರ ಮಾಡಿ ಆಶ್ರಮಕ್ಕೆ ಸ್ವಂತ ಜಾಗ ಕಲ್ಪಿಸಿದರೆ ಇನ್ನು ಅನೇಕ ಹಲವಾರು ಅಂಧ–ಅನಾಥರ ಬಾಳಿಗೆ ಬೆಳಕಾಗಬಹುದು.

ಮನುಷ್ಯರಿಯಲ್ಲಿರುವ ಅಹಂಕಾರ ಗರ್ವ ಮದ ಮತ್ಸರ ಅಳಿಯಬೇಕಾದರೆ ಒಮ್ಮೆ ಕಾರುಣ್ಯ ಕುಟುಂಬಕ್ಕೆ ಭೇಟಿ ನೀಡಬೇಕು. ನಿಜವಾದ ಮಾನವ ಧರ್ಮದ ನೀತಿಯ ಪಾಠಶಾಲೆಯಾಗಿ ಕಾರುಣ್ಯ ಕುಟುಂಬ ಕರುನಾಡಿನ ಕರುಣೆಯ ಕುಟುಂಬವಾಗಿದೆ ಎಂದು ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕಾವ್ಯಶ್ರೀ ಮೇಕಾ. ನವೀನ್ ಮೇಕಾ.ಪಾರ್ವತಿ ಮೇಕಾ. ಶ್ರೀನಿವಾಸ ಮೇಕಾ. ಮಾಧವಿ ಚಿಲುಕೂರಿ. ಶ್ರೀನಿವಾಸ ಚಿಲುಕೂರಿ ಕೆ. ಹಂಚಿನಾಳ ಕ್ಯಾಂಪ್. ಶ್ರಾವ್ಯ ಮೇಕಾ. ರಾಘವೇಂದ್ರ ಮೇಕಾ. ಪುಷ್ಪಲತಾ ಮೇಕಾ. ವೆಂಕಟೇಶ ಮೇಕಾ. ಯತ್ವಿಕ್.ನಿರ್ವಾನ್. ಗಾನ್ವಿಕಾ ಮೇಕಾ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ..ಮರಿಯಪ್ಪ.. ಜ್ಯೋತಿ. ಬಸವ ಸ್ವಾಮಿ. ಶರಣು ಸ್ವಾಮಿ . ಮಹಾಂತೇಶ ದೋಟಿಹಾಳ ಹಾಗೂ ಚಿಲುಕೂರಿ ಮತ್ತು ಮೇಕಾ ಕುಟುಂಬದ ಹಲವಾರು ಗುರು ಹಿರಿಯರುಗಳು ಉಪಸ್ಥಿತರಿದ್ದರು.

# ಮಕ್ಕಳಿಗೆ ಆಹಾರ ಸಿದ್ದಪಡಿಸುವಾಗ ಬಳಸುವ ನೀರು, ದವಸ ದಾನ್ಯ, ಪಾತ್ರೆಗಳು ಸೇರಿದಂತೆ ಎಲ್ಲ ಪರಿಕರಗಳ ನಿಗಾವಹಸಿಬೇಕು.:ಡಾ ಗಣೇಶ್ ಕೆ

**ನೈಜ್ಯ ದೆಸೆ ನ್ಯೂಸ್**

**ದೇವದುರ್ಗ: ತಯಾರಿಸಿದ ಆಹಾರ ಕಲುಷಿತವಾದಾಗ ಅಥವಾ ಕುಡಿಯುವ ನೀರು ಕಲುಷಿತವಾದಾಗ ವಾಂತಿ, ಭೇದಿಯಂತಹ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚು, ಈ ದಿಶೆಯಲ್ಲಿ ಶಾಲೆಗಳಲ್ಲಿ ಬಿಸಿಯೂಟದ ಅಡುಗೆ ತಯಾರಿಸುವ ಎಲ್ಲ ಸಿಬ್ಬಂದಿಯವರು ಆಹಾರ ಪದಾರ್ಥಗಳ ಸ್ವಚ್ಚಗೊಳಿಸಿದ ನಂತರ ಅಡುಗೆ ಮಾಡಿ ಮಕ್ಕಳಿಗೆ ಊಣ ಬಡಿಸುವ ತನಕ ನಿಗಾವಹಿಸಬೇಕು ಎಂದು ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ, ತಿಳಿಸಿದರು.**

ದೇವದುರ್ಗ ತಾಲುಕಿನ ಮಲ್ಲಾಪೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಹಾರ ಸೇವನೆ ನಂತರ ಮಕ್ಕಳು ಅಸ್ವಸ್ಥರಾದ ಹಿನ್ನಲೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾಖಲಾದ ಮಕ್ಕಳ ಚಿಕಿತ್ಸೆಯನ್ನು ತಾಲುಕಾ ಆರೋಗ್ಯಾಧಿಕಾರಿ ಡಾ ಬನದೇಶ ರವರೊಂದಿಗೆ ಮಕ್ಕಳ ಆರೋಗ್ಯದ ಮೇಲ್ವಿಚಾರಣೆ ಕೈಗೊಂಡು



ಮಾತನಾಡುತ್ತಾ, ದಾಖಲಾಗಿರುವ ಎಲ್ಲ ಮಕ್ಕಳು ಸುರಕ್ಷಿತವಾಗಿದ್ದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ರವರ ನಿರ್ದೇಶನದಂತೆ ವೈದ್ಯರ ತಂಡವು ಚಿಕಿತ್ಸೆ ನೀಡುತ್ತಿದೆ, ಮುಖ್ಯವಾಗಿ ಶಾಲೆಗಳಲ್ಲಿ ಅಡುಗೆಯವರು ನಿಯಮಿತವಾಗಿ ಆರೋಗ್ಯ ಪರೀಕ್ಷೆ ಮಾಡಿಸಬೇಕು. ತಲೆಗೆ ಕ್ಯಾಪ್, ಎಪ್ರಾನ್ ಧರಿಸಲು, ಉಗುರು ಸ್ವಚ್ಚವಾಗಿಟ್ಟುಕೊಳ್ಳಲು, ತಿಳಿಸಿದರು.

ತಾಲೂಕಾ ಆರೋಗ್ಯಾಧಿಕಾರಿ ಡಾ ಬನದೇಶ ಮಾತನಾಡಿ ಮಲ್ಲಾಪೂರ ಗ್ರಾಮದ ಶಾಲೆಯಲ್ಲಿ ದಿನದ 24 ಗಂಟೆ ವೈದ್ಯಕೀಯ ತಂಡವನ್ನು ಆಂಬ್ಯುಲೆನ್ಸ್ ನೊಂದಿಗೆ ನಿಯೋಜಿಸಲಾಗಿದ್ದು, ಓಆರ್ಎಸ್ ಸೇರಿದಂತೆ ಅಗತ್ಯ ಔಷಧಿ ವ್ಯವಸ್ತೆ ಮಾಡಲಾಗಿದ್ದು, ಹೊಸದಾಗಿ ಯಾವದೇ ಮಗು ಅಸ್ವಸ್ಥತೆಗೆ ಒಳಗಾಗಿಲ್ಲವೆಂದು ತಿಳಿಸಿದರು. ಪ್ರತಿಶಾಲೆಯ ನೀರಿನ ಸಂಪು ನೀರು ಸಂಗ್ರಹಕಗಳ ಒಳಭಾಗದಲ್ಲಿ ನಿಯಮಾನುಸಾರ ಸ್ವಚ್ಚಗೊಳಿಸಬೇಕು, ಆಹಾರ ಪದಾರ್ಥಗಳ ದಾಸ್ತಾನು ಕೊಠಡಿಯಲ್ಲಿ ನೆಲದಲ್ಲಿ ಕಾಯಿಪಲ್ಯೆ ಹಾಕದಂತೆ, ಧವಸ, ದಾನ್ಯಗಳಲ್ಲಿ ಇಲಿ ಇತರೆ ಕೀಟಗಳು ಬರದಂತೆ ನಿಗಾವಹಿಸಲು, ಅಡುಗೆ ಸಾಮಗ್ರಿಗಳ ಸ್ವಚ್ಚತಾ ಸ್ಥಳದಲ್ಲಿ ಸರಾಗವಾಗಿ ನೀರು ಹರಿದು ಹೋಗುವಂತೆ ನೋಡಿಕೊಳ್ಳಲು ಸೂಚಿಸಿದರು.

ಐಇಸಿ ತಂಡದಿಂದ ಆರೋಗ್ಯ ಶಿಕ್ಷಣ: ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ ನೇತೃತ್ವದಲ್ಲಿ ಜಿಲ್ಲಾ ಐಇಸಿ ತಂಡದಿಂದ ಗ್ರಾಮದಲ್ಲಿ ಮನೆಗಳಿಗೆ ತೆರಳಿ, ಮನೆಯಲ್ಲಾಗಲಿ ಅಥವಾ ಮನೆಯ ಹೊರಗೆ ಆಗಲಿ ಆಹಾರ ಸೇವಿಸುವ ಪೂರ್ವದಲ್ಲಿ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳುವುದನ್ನು ಮರೆಯಬಾರದೆಂದು, ವೈಯಕ್ತಿಕ ಶುಚಿತ್ವಕ್ಕೆ ಆದ್ಯತೆ ನೀಡಲು, ಬಿಸಿಯಾದ ಆಹಾರ ಸೇವಿಸಲು ವಿನಂತಿಸಿದರು.


ಈ ಸಂದರ್ಭದಲ್ಲಿ ವೈದ್ಯರಾದ ಡಾ ಪಲ್ಲವಿ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಜಿಲ್ಲಾ ಎಪಡಮಾಲಜಿಸ್ಟ್ ಶ್ರೀನಿವಾಸ್, ಹಿರಿಯ ಆರೋಗ್ಯ ನಿರಕ್ಷಣಾಧಿಕಾರಿ ಸೋಮಪ್ಪ, ಬಿಹೆಚ್ಇಓ ಗೀತಮ್ಮ, ಬ್ಲಾಕ್ ಎಫಿಡಮಲಾಜಿಸ್ಟ್ ಡಾ ತ್ಯಾಗರಾಜ್, ಹಿಆನಿಅ ಮಲ್ಲಿಕಾರ್ಜುನ್, ಹೆಚ್ಐಓ ರಾಚನಗೌಡ , ಪಿಹೆಚ್ಸಿಓ ರಶೀದಾ ಬೇಗಂ, ಹುಲಿಗೆಮ್ಮ, ಶಕುಂತಲಾ, ರೇಣುಕಾ, ಸುನಿತಾ, ಸಿಹೆಚ್ಓ ಸುನೀಲ್, ಶಂಕರ್, ಪ್ರಶಾಂತ್, ಹಾಗೂ ಮಾರುತಿ, ಆಶಾ ಕಾರ್ಯಕರ್ತೆ ನಿರ್ಮಲಾ, ರೇಣುಕಾ, ಬಸಮ್ಮ, ಭಾರತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಸ್ವಾತಂತ್ರ್ಯ ದಿನಾಚರಣೆಯಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಹಾಗೂ ರಾಷ್ಟ್ರಧ್ವಜಕ್ಕೆ ಅವಮಾನ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯ

**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿದ ರಾಯಚೂರು ಬಿಜೆಪಿ ಜಿಲ್ಲಾ ಅಧ್ಯಕ್ಷರಾದ ಈರಣ್ಣಗೌಡ ಲೆಕ್ಕಿಹಾಳ ಅವರು ಆಗಸ್ಟ್ 15 ರ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಭಾವಚಿತ್ರವನ್ನು ಇಡದೆ, ಅವರಿಗೆ ಘೋರ ಅಸಡ್ಡೆ ಮತ್ತು ಅವಮಾನ ಎಸಗಿರುತ್ತಾರೆ.**

ರಾಷ್ಟ್ರಧ್ವಜ ಹಾಗೂ ಮಹಾನ್ ನಾಯಕ–ರಿಗೆ ಅವಮಾನ ಮಾಡಿದ ಗೌಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದ ಧ್ವಜಾರೋಹಣ ಸಮಾರಂಭದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO) ಹಾಗೂ ಇತರ ಸೆಕ್ರೆಟರಿ ಕಾಲಿನಲ್ಲಿ ಶೂ ಧರಿಸಿಕೊಂಡೇ ಧ್ವಜಾರೋಹಣ ನೆರವೇರಿಸಿ, ರಾಷ್ಟ್ರಧ್ವಜಕ್ಕೂ ಹಾಗೂ ಮಹಾನ್ ನಾಯಕ–ರಿಗೂ ತೀವ್ರ ರೀತಿಯ ಅವಮಾನ ಮಾಡಿರುತ್ತಾರೆ.



ಸ್ವಾತಂತ್ರ್ಯ ದಿನಾಚರಣೆಯಂತಹ ಪವಿತ್ರ ರಾಷ್ಟ್ರೀಯ ಹಬ್ಬದಲ್ಲಿ ಸಂವಿಧಾನ ಶಿಲ್ಪಿಗಳನ್ನ ನಿರ್ಲಕ್ಷಿಸುವುದು ಮತ್ತು ರಾಷ್ಟ್ರಧ್ವಜದ ಶಿಷ್ಟಾಚಾರವನ್ನು ಉಲ್ಲಂಘಿಸಿ ಶೂ ಧರಿಸಿ ಧ್ವಜಾರೋಹಣ ಮಾಡುವುದು ಅಕ್ಷಮ್ಯ ಅಪರಾಧವಾಗಿದೆ.



ರಾಷ್ಟ್ರಧ್ವಜಕ್ಕೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಎಸಗಿದ ಬಿಜೆಪಿ ಜಿಲ್ಲಾ ಅಧ್ಯಕ್ಷ ಈರಣ್ಣಗೌಡ ಲೆಕ್ಕಿಹಾಳ ಅವರ ವಿರುದ್ಧ ತಕ್ಷಣವೇ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ರಾಷ್ಟ್ರೀಯ ಗೌರವಕ್ಕೆ ಧಕ್ಕೆ ತಂದ ಗೌಡೂರು ಗ್ರಾಮ ಪಂಚಾಯಿತಿ ಕಆಔ ಹಾಗೂ ಸಂಬಂಧಪಟ್ಟ ಅಧಿಕಾರಿಗಳನ್ನು ತಕ್ಷಣವೇ ಸೇವೆಯಿಂದ ಅಮಾನತುಗೊಳಿಸಿ (Suspension) ಅವರ ಮೇಲೆ ಇಲಾಖಾ ತನಿಖೆಗೆ ಆದೇಶಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಹಾಗೂ ರಾಷ್ಟ್ರೀಯ ಗೌರವಕ್ಕೆ ಅಪಮಾನ ತಡೆ ಕಾಯ್ದೆಯಡಿ ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಬೇಕು. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮಾಡಿದ ಈ ಕೃತ್ಯವು ಸಾರ್ವಜನಿಕರಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದ್ದು, ತಕ್ಷಣವೇ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಜರುಗಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಮೋಹನ್ ಗೋಸ್ಲೆ ಕರಡಕಲ್ ನಾಮನಿರ್ದೇಶಿತಸದಸ್ಯರು,SCSTದೌರ್ಜನ್ಯತಡೆಸಮಿತಿ (ಲಿಂಗಸಗೂರು, ಮಸ್ಕಿ ಹಾಗೂ ಸಿಂಧನೂರು ) ಇವರು ಒತ್ತಾಯಿಸಿದರು .

# 15 ಸಾವಿರ ಶಿಕ್ಷಕರ ನೇಮಕಾತಿಯಲ್ಲಿ 5 ವರ್ಷ ವಯೋಮಿತಿ ಸಡಿಲಿಕೆಗೆ ಆಗ್ರಹ

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ರಾಜ್ಯ ಸರ್ಕಾರದ ಆದೇಶದಂತೆ 15,000 ಶಿಕ್ಷಕರ ನೇಮಕಾತಿಯಲ್ಲಿ ಐದು ವರ್ಷಗಳ ವಯೋಮಿತಿ ಸಡಿಲಿಕೆ ಜಾರಿಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆಲ್ ಇಂಡಿಂ–ಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐ–ಡಿವೈಒ) ಹಾಗೂ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ (ಜೆಎಎಸ್ಸಿ) ನೇತೃತ್ವದಲ್ಲಿ ಬೆಂಗಳೂ–ರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.**

ಪ್ರತಿಭಟನಾಕಾರರು ಮುಖ್ಯಮಂತ್ರಿ ಹಾಗೂ ಶಾಲಾ ಶಿಕ್ಷಣ ಸಚಿವರಿಗೆ ಬರೆದ ಮನವಿ ಪತ್ರವನ್ನು ಸಚಿವರಾದ ಡಾ. ಅಜಯ್ ಸಿಂಗ್ ಅವರಿಗೆ ಸಲ್ಲಿಸಿದರು. ಮನವಿ ಸ್ವೀಕರಿಸಿದ ಸಚಿವ ಡಾ. ಅಜಯ್ ಸಿಂಗ್ ಅವರು, ರಾಜ್ಯ ಸರ್ಕಾರವು 2026ರ ಜನವರಿ 29ರಂದು ಹೊರಡಿಸಿರುವ ರಾಜ್ಯಪತ್ರದಲ್ಲಿ 31–12–2027ರವರೆಗೆ ರಾಜ್ಯ ಸರ್ಕಾರದ ಎಲ್ಲಾ ನೇರ ನೇಮಕಾತಿಗಳಲ್ಲಿ ಐದು ವರ್ಷಗಳ ವಯೋಮಿತಿ ಸಡಿಲಿಕೆ ಮಾಡಿರುವುದು ಸರ್ಕಾರದ ಗಮನದಲ್ಲಿದೆ. ಈ ಬೇಡಿಕೆ ನ್ಯಾಯೋಚಿತವಾಗಿದ್ದು, ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಶೀಘ್ರವೇ ಸೂಕ್ತ ತೀರ್ಮಾನ ಕೈಗೊಂಡು ಉದ್ಯೋಗಾಕಾಂಕ್ಷಿಗಳ ಪರವಾಗಿ ನಿಲ್ಲುವುದಾಗಿ ಭರವಸೆ ನೀಡಿದರು.

ಅಲ್ಲದೆ, ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದಲ್ಲಿ ಗಣಿತ ವಿಷಯದಲ್ಲಿ ಅನುತ್ತೀರ್ಣರಾಗುತ್ತಿರುವ ವಿದ್ಯಾರ್ಥಿಗಳ ಪ್ರಮಾಣ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಗಣಿತ ಸೇರಿದಂತೆ ಅಗತ್ಯ ವಿಷಯಗಳ ಶಿಕ್ಷಕರ ನೇಮಕಾತಿಯ ಬಗ್ಗೆಯೂ ಸರ್ಕಾರ ಗುಣಾತ್ಮಕವಾಗಿ ಸ್ಪಂದಿಸಲಿದೆ ಎಂದು ತಿಳಿಸಿದರು.

ಸರ್ಕಾರದ ಆದೇಶ ಪಾಲನೆಗೆ ಆಗ್ರಹ ಸಾರ್ವಜನಿಕ ಶಿಕ್ಷಣ ಇಲಾಖೆ 15,000 ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿರುವುದನ್ನು ಎಐ–ಡಿವೈಒ ಹಾಗೂ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಸ್ವಾಗತಿಸಿವೆ. ಯುವಜನರ ನಿರಂತರ ಹೋರಾಟ




ಮತ್ತು ಒತ್ತಾಯದ ಫಲವಾಗಿ ಬಹಳ ದಿನಗಳ ನಂತರ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭವಾಗಿರುವುದು ಸ್ವಾಗತಾರ್ಹವಾಗಿದೆ ಎಂದು ಸಂಘಟನೆಗಳು ತಿಳಿಸಿವೆ.

ಆದರೆ, ರಾಜ್ಯ ಸರ್ಕಾರವು ಸರ್ಕಾರದ ಆದ–ೇಶ ಸಂಖ್ಯೆ: ಸಿಆಸುಇ 262 ಸೇನೆನಿ 2025, ಬೆಂಗಳೂರು, ದಿನಾಂಕ: 29–01–2026ರ ರಾಜ್ಯಪತ್ರದ ಮೂಲಕ 31–12–2027ರವರೆಗೆ ಎಲ್ಲಾ ನೇರ ನೇಮಕಾತಿಗಳಲ್ಲಿ ಐದು ವರ್ಷಗಳ ವಯೋಮಿತಿ ಸಡಿಲಿಕೆ ಘೋಷಿಸಿದ್ದರೂ, 15,000 ಶಿಕ್ಷಕರ ನೇಮಕಾತಿ ಅಧಿಸೂಚನೆಯಲ್ಲಿ ಈ ಸಡಿಲಿಕೆಯನ್ನು ಅಳವಡಿಸದಿರುವುದು ಖೇದಕರ ಸಂಗತಿ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಅನೇಕ ಅಭ್ಯರ್ಥಿಗಳು ಟಿಇಟಿ ಉತ್ತೀರ್ಣರಾಗಿದ್ದರೂ, ಕೇವಲ ಒಂದು ವಾರ, 15 ದಿನ ಅಥವಾ ಒಂದು ತಿಂಗಳ ಅಂತರದಲ್ಲಿ ವಯೋಮಿತಿ ಮೀರುವ ಪರಿಸ್ಥಿತಿಯಲ್ಲಿದ್ದಾರೆ. ಇದರಿಂದ ಹಲವು ಅರ್ಹ ಅಭ್ಯರ್ಥಿಗಳು ನೇಮಕಾತಿ ಪ್ರಕ್ರಿಯೆಯಿಂದ ಹೊರಗುಳಿಯುವ ಆತಂಕ ಎದುರಿಸುತ್ತಿದ್ದಾರೆ. ಸರ್ಕಾರವೇ ಹೊರಡಿಸಿರುವ ಆದೇಶವನ್ನು ಶಿಕ್ಷಣ ಇಲಾಖೆ ಪಾಲಿಸಬೇಕು ಎಂದು ಒತ್ತಾಯಿಸಲಾಯಿತು.

ಇತರ ನೇಮಕಾತಿಗಳಿಗೆ ಸಡಿಲಿಕೆ ನೀಡಿರುವ ಉದಾಹರಣೆ 2022ರಲ್ಲಿ ಶಿಕ್ಷಕರ ನೇಮಕಾತಿ ಸಂದರ್ಭದಲ್ಲಿ ಕೋವಿಡ್ ಹಿನ್ನೆಲೆಯಲ್ಲಿ ವಯೋಮಿತಿ ಸಡಿಲಿಕೆ ನೀಡಿ ಸಾಮಾನ್ಯ ವರ್ಗಕ್ಕೆ 42 ವರ್ಷ, 2ಎ, 2ಬಿ, 3ಎ, 3ಬಿ ವರ್ಗಗಳಿಗೆ 45 ವರ್ಷ ಹಾಗೂ ಎಸ್‌ಸಿ, ಎಸ್‌ಟಿ, ಪ್ರವರ್ಗ–1 ಮತ್ತು ವಿಕಲಚೇತನ ಅಭ್ಯರ್ಥಿಗಳಿಗೆ 47 ವರ್ಷ ವಯೋಮಿತಿ ನಿಗದಿಪಡಿಸಲಾಗಿತ್ತು.

ಇದೇ ರೀತಿ, ಕ್ರೈಸ್ ವಸತಿ ಶಾಲೆಗಳ ಶಿಕ್ಷಕರ ನೇಮಕಾತಿಯ ಅಧಿಸೂಚನೆ ಸಂಖ್ಯೆ: ಇಆ/ಏಇಂ/05ನೇ.ವಿ/2026(ಕೆ.ಕೆ), ದಿನಾಂಕ 10–07–2026ರಲ್ಲಿ ಐದು ವರ್ಷಗಳ ವಯೋಮಿತಿ ಸಡಿಲಿಕೆ ನೀಡಿ ಕ್ರಮವಾಗಿ 45, 48 ಹಾಗೂ 50 ವರ್ಷಗಳಿಗೆ ವಯೋಮಿತಿಯನ್ನು ಹೆಚ್ಚಿಸಲಾಗಿದೆ. ಅದೇ ರೀತಿ, ಕೆಪಿಎಸ್‌ಸಿಯ 2026–27ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳ ನೇಮಕಾತಿಯಲ್ಲಿಯೂ ಐದು ವರ್ಷಗಳ ವಯೋಮಿತಿ ಸಡಿಲಿಕೆ ನೀಡಲಾಗಿದೆ. ಹೀಗಿರುವಾಗ ಶಿಕ್ಷಕರ ನೇಮಕಾತಿಯಲ್ಲಿ ಮಾತ್ರ ಈ ಸೌಲಭ್ಯವನ್ನು ನೀಡದಿರುವುದು ತಾರತಮ್ಯಕ್ಕೆ ಕಾರಣವಾಗುತ್ತದೆ ಎಂದು ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿವೆ.

11 ವರ್ಷಗಳ ನಂತರ ನಡೆಯುತ್ತಿರುವ ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಇನ್ನೊಂದೆಡೆ, ಸುಮಾರು 11 ವರ್ಷಗಳ ನಂತರ 4,500 ಪ್ರೌಢಶಾಲಾ ಶಿಕ್ಷಕರ ನೇಮಕಾತಿ ನಡೆಯುತ್ತಿರುವುದು ಉದ್ಯೋಗಾಕಾಂಕ್ಷಿಗಳಲ್ಲಿ ನಿರೀಕ್ಷೆ ಮೂಡಿಸಿದೆ. ಆದರೆ ಗಣಿತ, ಹಿಂದಿ, ಉರ್ದು ಸೇರಿದಂತೆ ಹಲವು ವಿಷಯಗಳ ಶಿಕ್ಷಕರ ಹುದ್ದೆಗಳು ಖಾಲಿ ಇದ್ದರೂ ಅವುಗಳನ್ನು ನೇಮಕಾತಿಯಲ್ಲಿ ಸೇರ್ಪಡೆ ಮಾಡದಿರುವುದು ಹಲವು ಪದವೀಧರ ಹಾಗೂ ಬಿಎಡ್ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಲಿದೆ ಎಂದು ಪ್ರತಿಭಟನಾಕಾರರು ಹೇಳಿದರು.

ವಿಶೇಷವಾಗಿ ಗಣಿತ, ಹಿಂದಿ, ಉರ್ದು ಸೇರಿದಂತೆ ವಿವಿಧ ವಿಷಯಗಳಲ್ಲಿ ಪದವಿ ಹಾಗೂ ಬಿಎಡ್ ಪೂರ್ಣಗೊಳಿಸಿ ಹಲವು ವರ್ಷಗಳಿಂದ ಶಿಕ್ಷಕರಾಗುವ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು.

ಜಿಪಿಟಿ ಶಿಕ್ಷಕರಿಗೆ ಬಡ್ತಿ ನೀಡಿ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಗಣಿತ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂಬ ಮಾಹಿತಿ ಕೇಳಿಬರುತ್ತಿದೆ. ಆದರೆ ಸರ್ಕಾರದ ನಿಯಮಾನುಸಾರ ಎಲ್ಲಾ ಖಾಲಿ ಹುದ್ದೆಗಳನ್ನು ಕೇವಲ ಬಡ್ತಿ ಮೂಲಕವೇ ಭರ್ತಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಖಾಲಿ ಇರುವ ಎಲ್ಲಾ ಹುದ್ದೆಗಳ ಸ್ಥಿತಿಗತಿಯನ್ನು ಪರಿಶೀಲಿಸಿ ನೇರ ನೇಮಕಾತಿ ಮೂಲಕ ಅರ್ಹ ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಲಾಯಿತು.

ಪ್ರಮುಖ ಬೇಡಿಕೆಗಳು ಎಐ–ಡಿವೈಒ ಹಾಗೂ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಸರ್ಕಾರದ ಮುಂದೆ ಪ್ರಮುಖವಾಗಿ ಈ ಕೆಳಗಿನ ಬೇಡಿಕೆಗಳನ್ನು ಮಂಡಿಸಿವೆ:

1. 15,000 ಶಿಕ್ಷಕರ ನೇಮಕಾತಿಯಲ್ಲಿ ರಾಜ್ಯ ಸರ್ಕಾರದ 29–01–2026ರ ಆದೇಶದಂತೆ ಐದು ವರ್ಷಗಳ ವಯೋಮಿತಿ ಸಡಿಲಿಕೆ ಜಾರಿಗೊಳಿಸಬೇಕು.
2. ವಯೋಮಿತಿ ಕಾರಣದಿಂದ ಹೊರಗುಳಿಯುವ ಅರ್ಹ ಟಿಇಟಿ ಉತ್ತೀರ್ಣ ಅಭ್ಯರ್ಥಿಗಳಿಗೆ ಮಾನವೀಯ ಹಾಗೂ ಕಾನೂನಾತ್ಮಕ ನೆಲೆಯಲ್ಲಿ ಅವಕಾಶ ಕಲ್ಪಿಸಬೇಕು.
3. 4,500 ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಗಣಿತ, ಹಿಂದಿ, ಉರ್ದು ಸೇರಿದಂತೆ ಅಗತ್ಯವಿರುವ ಎಲ್ಲಾ ವಿಷಯ ಶಿಕ್ಷಕರ ಹುದ್ದೆಗಳನ್ನು ಸೇರ್ಪಡೆ ಮಾಡಬೇಕು.
4. ಪ್ರೌಢಶಾಲೆಗಳಲ್ಲಿ ಖಾಲಿ ಇರುವ ವಿಷಯವಾರು ಶಿಕ್ಷಕರ ಹುದ್ದೆಗಳ ಕುರಿತು ಸಮಗ್ರ ಅಧ್ಯಯನ ನಡೆಸಿ ಅಗತ್ಯ ಸಂಖ್ಯೆಯ ಹುದ್ದೆಗಳನ್ನು ಭರ್ತಿ ಮಾಡಬೇಕು.
5. ಮಕ್ಕಳ ಗುಣಮಟ್ಟದ ಶಿಕ್ಷಣ ಹಾಗೂ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಶಿಕ್ಷಕರ ಕೊರತೆಯನ್ನು ತಕ್ಷಣ ನೀಗಿಸಬೇಕು.

ಎಐಡಿವೈಒ ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಜಿ. ಶಶಿಕುಮಾರ್ ಮಾತನಾಡಿ, "ಮಾನವೀಯ ದೃಷ್ಟಿಯಿಂದ ಹಾಗೂ ರಾಜ್ಯ ಸರ್ಕಾರದ ಆದೇಶದಂತೆ 15,000 ಶಿಕ್ಷಕರ ನೇಮಕಾತಿಯಲ್ಲಿ ಐದು ವರ್ಷಗಳ ವಯೋಮಿತಿ ಸಡಿಲಿಕೆ ನೀಡಬೇಕು. ಟಿಇಟಿ ಸೇ–ರಿದಂತೆ ಅಗತ್ಯ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಕೇವಲ ವಯೋಮಿತಿ ಕಾರಣದಿಂದ ಅವಕಾಶ ನಿರಾಕ–ರಿಸಬಾರದು. ಮಕ್ಕಳ ಸಮಗ್ರ ಬೆಳವಣಿಗೆ ಮತ್ತು ಗುಣಮಟ್ಟದ ಕಲಿಕೆಯ ಹಿತದೃಷ್ಟಿಯಿಂದ ಪ್ರೌಢಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಗಣಿತ, ಹಿಂದಿ, ಉರ್ದು ಸೇರಿದಂತೆ ಅಗತ್ಯವಿರುವ ವಿಷಯ ಶಿಕ್ಷಕರನ್ನು ಸೇರ್ಪಡೆ ಮಾಡಬೇಕು" ಎಂದು ಒತ್ತಾಯಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಎಐ–ಡಿವೈಒ ರಾಜ್ಯ ಕಾರ್ಯದರ್ಶಿ ಸಿದ್ಧಲಿಂಗ ಬಾಗೇವಾಡಿ, ರಾಜ್ಯ ಉಪಾಧ್ಯಕ್ಷ ವಿನಯ ಸಾರಥಿ, ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯ ರಾಜ್ಯ ಸಹ ಸಂಚಾಲಕ ಭವಾನಿ ಶಂಕರ್ ಗೌಡ ವಹಿಸಿದ್ದರು. ಉದ್ಯೋಗಾಕಾಂಕ್ಷಿಗಳಾದ ಲಕ್ಷ್ಮಿ ರೆಡ್ಡಿ, ವೆಂಕಟಯ್ಯ, ಅಬ್ದುಲ್ ಭಾಷಾ ಪಟೇಲ್, ಸರೋಜಾ, ಎಲ್ಲಪ್ಪ ದೊರೆ, ಪರಶುರಾಮ್, ಜಗದೀಶ್ ನೇಮಕಲ್, ರಣಜಿತ್, ಜಯಣ್ಣ, ಕಲಾವತಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಜಯಣ್ಣ ಸಂಘಟನೆಗಳ ಪರವಾಗಿ

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101